

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 317 Thursday 29-08-2024 E-mail : maruti.b.hosamani76@gmail.com Page: 4 Price : Rs. 1/-

## ಶ್ರೀ ಸತ್ಯಾತ್ಮ ತೀರ್ಥರ ಚಾತುರ್ಮಾಸ್ಯದ ಅಂಗವಾಗಿ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ

**ಇಲಕಲ್ಲ :** ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥರ ದಿವ್ಯಾನು ಗ್ರಹದಿಂದ ನೂರು ಜನ ಬಡವರಿಗೆ ಉಚಿತವಾಗಿ ಕಣ್ಣಿನ ಪೊ–ರೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುವುದು ಎಂದು ಖ್ಯಾತ ನೇತ್ರ ತಜ್ಞರಾದ ಡಾ. ಸುಶೀಲ ಕಾಖಂಡಕಿಯವರು ಇಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ. ರಾಘವೇಂದ್ರ ನೇತ್ರ ಸೇವಾ ಕೇಂದ್ರ ಚಾರಿಟೇಬಲ್ ಟ್ರಸ್ಟ್, ಇಳಕಲ್ ಬ್ರಾಹ್ಮಣ ಸಮಾಜ ಹಾಗೂ ಲಯನ್ಸ್ ಕ್ಲಬ್ ಇಳಕಲ್ ಶಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಗಸ್ಟ್ 30 ಹಾಗೂ 31 ರಂದು ಕಣ್ಣಿನ ಪೊರೆ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆಯಬಹುದಾಗಿದೆ ಎಂದು ಅವರು ಹೇಳಿದರು.

ಈ ಉಚಿತ ಶಿಬಿರದ ಎಲ್ಲ ಮಾಹಿತಿಗಳನ್ನು ಟ್ರಸ್ಟ್ನ ಅಧ್ಯಕ್ಷೆ ಸುದೀಪ್ತಾ ಕಾಖಂಡಕಿಯವರು ತಿಳಿಸುತ್ತಾ ಲೋಕ ಕಲ್ಯಾಣಕ್ಕಾಗಿ ಅನೇಕ ಸೇವೆ ಹಾಗೂ ಯೋಜನೆಗಳನ್ನು ಹಾಕಿ ಕೊಂಡು ಈಗ ಮುಂಬೈನಲ್ಲಿ ಚಾತುಮಾಸ್ಯ ಸಂಕಲ್ಪ ಕೈಗೊಂಡಿರುವ ಉತ್ತರಾದಿ ಮಠಾಧೀಶರಾದ



ಶ್ರೀ ಶ್ರೀ ಸತ್ಯಾತ್ಮ ತೀರ್ಥರ ಅನುಗ್ರಹ ದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಭವ್ಯ ಇತಿಹಾಸ ಹೊಂದಿರುವ ಉತ್ತರಾದಿ ಮಠದ ಚಾತುರ್ಮಾಸ್ಯ ಹಾಗೂ ಮಹಾ ಸಮಾರಾಧನೆಗಳು ದೇಶಾದ್ಯಂತ ತುಂಬಾ ಜನಪ್ರಿಯವಾಗಿವೆ. ಶ್ರೀ ಸತ್ಯಾತ್ಮ ತೀರ್ಥರ ದರ್ಶನ ಮಾತ್ರದಿಂದ ತಮ್ಮ ಪಾಪಗಳೆಲ್ಲ ದೂರವಾಗುವವು ಎಂದು ಭಕ್ತರು ನಂಬಿದ್ದಾರೆ. ಶ್ರೀಗಳ ಕ್ಷಣ ಮಾತ್ರದ ದರ್ಶನಕ್ಕಾಗಿ ಜನರು ಹಾತೊರೆಯುತ್ತಾರೆ. ವಿದೇಶಗಳಲ್ಲಿಯೂ ಅವರಿಗೆ ಅಪಾರ ಸಂಖ್ಯೆಯ ಭಕ್ತ ರಿದ್ದಾ–ರೆಂದು ಈ ಸಂದರ್ಭದಲ್ಲಿ ಕಾಖಂಡಕಿ ದಂಪತಿಗಳು ಗುರುಗಳನ್ನು ಸ್ಮರಿಸಿದರು.

ಇಳಕಲ್ ಬ್ರಾಹ್ಮಣ ಸಮಾಜ, ಲಯನ್ಸ್ ಕ್ಲಬ್ ಹಾಗೂ ಜೇಸಿ ಸಿಲ್ಕ್ ಸಿಟಿ ಸಂಸ್ಥೆ, ಅಕ್ಕನ ಬಳಗ ಸಂಸ್ಥೆ, ಕುಷ್ಟಗಿ ಇನ್ನರ್ ವ್ಹೀಲ್ ಕೂಡಾ ಈ ಸೇವೆಯಲ್ಲಿ ಕೈಜೋಡಿಸಿವೆ. ಅಗಸ್ಟ್ 30 ರಂದು ತಮ್ಮ ಆಸ್ಪತ್ರೆಯಲ್ಲಿ ಕ್ಯಾಟರ್ಯಾಮಕ್ಟ್ ಆಪರೇಶನ್ ಮಾಡಲಾಗುವುದು ಹಾಗೂ ಮರುದಿನ 31 ರಂದು ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಶುಶ್ರೂಷೆ ಮಾಡಲಾಗುವುದು ಎಂದು ಡಾ. ಕಾಖಂಡಕಿ ಅವರು ತಿಳಿಸಿದರು. 31 ರಂದು ಬೆಳಿಗ್ಗೆ ಪಾಂಡುರಂಗ ಸಮುದಾಯ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಎಲ್ಲ ಫಲಾನುಭವಿಗಳು ಭಾಗವಹಿಸುತ್ತಾರೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಹುನಗುಂದ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ವಿಜಯಾನಂದ ಕಾಶಪ್ಪನವರ ಹಾಗೂ ಹಿರಿಯ ಮುಖಂಡರಾದ ವೆಂಕಟೇಶ ಸಾಕಾ, ರಾಜು ಎಂ. ಬೋರಾ, ಶಾಂತು ಸುರಪುರ, ಅವರು ಆಗಮಿಸಲಿದ್ದಾರೆ. ಶ್ರೀಮತಿ ಸುದೀಪ್ತಾ ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆಯ ಮೇಲೆ ಬ್ರಾಹ್ಮಣ ಸಮಾಜದ ಅಧ್ಯಕ್ಷ ಪಾಂಡುರಂಗ ಕುಲಕರ್ಣಿ, ಲಯನ್ಸ್ ಕ್ಲಬ್ ಅಧ್ಯಕ್ಷ ಮಹಾಬಳೇಶ ಮರಟದ, ಜೇಸಿ ಸಿಲ್ಕ್ ಸಿಟಿ ಅಧ್ಯಕ್ಷೆ ರಾಜೇಶ್ವರಿ ಹರಿಹರ ಉಪಸ್ಥಿತರಿರುತ್ತಾರೆ.

ಶ್ರೀ ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನವಾದ ಉತ್ತರಾದಿ ಮಠವು ಶ್ರೀ ಸತ್ಯಾತ್ಮ ತೀರ್ಥರ ವಿದ್ವತ್ತು ಹಾಗೂ ಶಿಷ್ಯರಿಗೆ ಅವರು ಧಾರೆ ಎರೆಯುವ ವಿದ್ವತ್ತುಗಳಿಂದ ಶ್ರೀಮಠವು ಕೀರ್ತಿ ಶಿಖರದ ಉತ್ತುಂಗಕ್ಕೇರಿದೆ. ಸದಾ ಲೋಕ ಕಲ್ಯಾಣದ ಚಿಂತನೆಯನ್ನು ಮಾಡುತ್ತಿರುವ ಉತ್ತರಾದಿ ಮಠಾಧೀಶರ ಅನುಗ್ರಹವು ನಮ್ಮ ಜೀವನವನ್ನು ಪುನೀತ ಗೊಳಿಸಿದೆ ಎಂದು ಡಾ. ಕಾಖಂಡಕಿ ಹೇಳಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು.**

## ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ "ಪ್ರತಿ ಖಾತೆ" ಆಂದೋಲನ

**ಕೊಟ್ಟೂರು :** ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರ ದಶಕಗಳ ಸಮಸ್ಯೆಯಾದ ಪೌತಿ, ಪೋಡಿ, ಪಿಂಚಣಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಲಾಗಿತ್ತು. ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಚಿಂತಿಸಲಾಗಿದ್ದು, ಇದರಲ್ಲಿ ಪ್ರಮುಖವಾಗಿ ಸಮಸ್ಯೆಯಿರುವ ಪೌತಿ ಖಾತೆಗಳ ಸಮಸ್ಯೆಯನ್ನು ಇತ್ಯರ್ಥಪಡಿಸಲು ವಿಶೇಷ ಆಂದೋಲನ ಕೈಗೊಳ್ಳಲಾಗಿದೆ.

ಕ್ಷೇತ್ರದಲ್ಲಿ ಅಂದಾಜು 20 ಸಾವಿರಕ್ಕೂ ಹೆಚ್ಚು ಪೌತಿ ಖಾತೆಗಳು ಇರುವ ಬಗ್ಗೆ ಮಾಹಿತಿ ಇದೆ.

ಪೌತಿ ಖಾತೆಯಿಂದ ಕುಟುಂಬಸ್ಥರಿಗೆ ಜಮೀನು ಅಭಿವೃದ್ಧಿ ಪಡಿಸಲು ಸಾಲ ಸೌಲಭ್ಯಗಳನ್ನು ಪಡೆಯಲು, ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದಗ ಸರ್ಕಾರ ದಿಂದ ನೀಡಲಾಗುವ ವಿಮೆ/ಪರಿಹಾರಗಳನ್ನು ಪಡೆಯಲು, ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನವಾದಗ ಪರಿಹಾರ ಪಡೆಯಲು ಅರ್ಹವಾಗುವುದಿಲ್ಲ. ಇದ–



ರಿಂದ ಬಡ ರೈತರಿಗೆ ತುಂಬಾ ತೊಂದರೆ ಯಾಗುತ್ತದೆ. ಬಹುತೇಕ ಪೌತಿ ಖಾತೆಗಳು 2–3 ತಲೆಮಾರು ಗಳಿಂದ ದಾಖಲೆಗಳ ಕೊರತೆಯಿಂದ ಬಾಕಿ ಉಳಿದಿರುವ ಬಗ್ಗೆ ಮಾಹಿತಿಯಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ : ಕಂ ಇ 33 ಟಿ ಆರ್ ಎಂ 2019 (ಇ) ದಿನಾಂಕ 17/10/2020 ರಂದು ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ : ಕಂ ಇ 33 ಟಿ ಆರ್ ಎಂ 2019 (ಇ) ದಿನಾಂಕ : 2019 (ಇ )10/01/2024 ಹೊರಡಿಸಲಾದ ಸುತ್ತೋಲೆಯಲ್ಲಿ ದಾಖಲೆಗಳ ಕೊರತೆಯಿದ್ದಾಗ ಪೌತಿ ಖಾತೆಗಳನ್ನು ಯಾವ ಮಾನದಂಡದಲ್ಲಿ ಕ್ರಮ ವಹಿಸಬೇಕು ಎಂಬುದರ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಸದರಿ ಸುತ್ತೋಲೆಗಳ ಆಧಾರದ ಮೇಲೆ ಅಗತ್ಯ ಕ್ರಮ ವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಕೋರಲಾಗಿತ್ತು. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪತ್ರ ಸಂಖ್ಯೆ ಸಂ/ಕಂ/ಆರ್. ಆರ್. ಟಿ/40/2024–25 ದಿನಾಂಕ 26.08.2024 ರಂತೆ ಪೌತಿ ಆಂದೋಲನ ಕೈಗೊಳ್ಳಲು ಎಲ್ಲ ತಹಶಿಲ್ದಾರವರಿಗೆ ಸೂಚನೆ ನೀಡಲಾಗಿದೆ.

ನಮ್ಮ ವಿಧಾನ ಸಭಾ ಕ್ಷೇತ್ರವನ್ನು ಪೌತಿ ಖಾತೆ ಮುಕ್ತ ಕ್ಷೇತ್ರವನ್ನಾಗಿಸಲು ಸಂಕಲ್ಪ ಮಾಡಿದ್ದು, ನಮ್ಮ ಕ್ಷೇತ್ರ ವ್ಯಾಪ್ತಿಯ ಎಲ್ಲ ಗೌರವಾನ್ವಿತ "ರೈತ" ಬಾಂದವರು ತಮ್ಮ ಗ್ರಾಮದ ಗ್ರಾಮ ಆಡಳಿತ ಅಧಿಕಾರಿಗಳಿಗೆ / ಗ್ರಾಮ ಸಹಾಯಕರಿಗೆ ತಮ್ಮ ಅರ್ಜಿ ಮತ್ತು ದಾಖಲೆಗಳನ್ನು ಸಲ್ಲಿಸಲು ಈ ಮೂಲಕ ರೈತರಲ್ಲಿ ಕೋರಲಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು.**

## ಪಟ್ಟಣದಲ್ಲಿ 63 ಶಿಲಾಮೂರ್ತಿಗಳ ವಾಹನಕ್ಕೆ ಅದ್ದೂರಿ ಸ್ವಾಗತ

**ತಾಳಿಕೋಟಿ :** ತಾಲೂಕಿನ ಸಾಸನೂರ ಗ್ರಾಮದ ಶ್ರೀ ಮಡಿವಾಳೇಶ್ವರ ಹಿರೇಮಠದಲ್ಲಿ ಪ್ರತಿಷ್ಠಾಪನೆ ಗೊಳ್ಳಲಿರುವ 63 ಶಿಲಾಮೂರ್ತಿಗಳ ವಾಹನವನ್ನು ಪಟ್ಟಣದಲ್ಲಿ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ಸೋಮವಾರ ಇಲಕಲ್ಲ ಪಟ್ಟಣದಿಂದ ಮುದ್ದೇಬಿಹಾಳ ಮಾರ್ಗವಾಗಿ ಪಟ್ಟಣಕ್ಕೆ 63 ಶಿಲಾಮೂರ್ತಿಗಳನ್ನು ಹೊತ್ತ ವಾಹನಗಳು ಶ್ರೀ ಬಸವೇಶ್ವರ ವೃತ್ತಕ್ಕೆ ಆಗಮಿಸಿದಾಗ ಅವುಗಳನ್ನು ಸಕಲ ವಾದ್ಯ ಮೇಳ ಗಳೊಂದಿಗೆ ಸ್ವಾಗತಿಸಿಕೊಳ್ಳಲಾಯಿತು. ಅಲ್ಲಿಂದ ಆರಂಭಗೊಂಡ ಮೂರ್ತಿಗಳ ಮೆರವಣಿಗೆಯು ಅಂಬೇಡ್ಕರ್ ವೃತ್ತ, ಕತ್ರಿ ಬಜಾರ್, ಶಿವಾಜಿ ಸರ್ಕಲ್ ಬಸ್ ನಿಲ್ದಾಣ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತಕ್ಕೆ ತಲುಪಿತು. ಈ ವೇಳೆ ನಾವದಗಿ ಬ್ರಹನ್ಮಠದ ಷ.ಬ್ರ. ರಾಜಗುರು ಶ್ರೀ ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಪರಮ ತಪಸ್ವಿಗಳಾದ ಸಾಸನೂರ–ತುಂಬಗಿ ಮಡಿವಾಳೇಶ್ವರ ಹಿರೇಮಠದ ಪರಮ ಪೂಜ್ಯ ಶ್ರೀ



ಮಹಾಂತಲಿಂಗ ಶಿವಾಚಾರ್ಯರು ತಮ್ಮ ಶ್ರೀಮಠದಲ್ಲಿ 63 ಶಿಲಾ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕೆಂಬ ಸಂಕಲ್ಪವನ್ನು ಮಾಡಿದ್ದರು ಅವರು ಸಂಕಲ್ಪ ಮಾಡಿದ್ದನ್ನು ಸಾಧಿಸಿ ತೋರಿಸುವ ಹಠವಾದಿಗಳು ಇದೀಗ ಅವರ ಸಂಕಲ್ಪವು ಪೂರ್ಣಗೊಳ್ಳುತ್ತಿದೆ. ಇಲ್ಲಿಂದ ಈ ಅರವತ್ಮೂರು ಶಿಲಾ ಮೂರ್ತಿಗಳನ್ನು ಅವರ ಮಠದಲ್ಲಿ ಪ್ರತಿಷ್ಠಾಪಿಸಲಾವುದು ಇದಕ್ಕೆ ಸದ್ಭಕ್ತರ ತನು ಮನ ಧನದ ಸಹಕಾರ ಇರಲಿ ಎಂದರು. ಮೆರವಣಿಗೆಯಲ್ಲಿ ಶ್ರೀ ಮಡಿವಾಳೇಶ್ವರ ಹಿರೇಮಠದ ಶ್ರೀ ಷ.ಬ್ರ. ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು. ಕೊಡೆಕಲ್ ದುರದುಂಡೇಶ್ವರ ಮಠದ ಪರಮಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಪಡೇಕನೂರದ ಪರಮಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು. ತಾಲೂಕ ಬೇಡ ಜಂಗಮ ಸಮಾಜದ ಗೌರವ ಅಧ್ಯಕ್ಷ ಜ್ಯೋತಿಷ್ಯ ರತ್ನ ಪರಮಪೂಜ್ಯ ಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು.ಕಲಿಕೇರಿಯ ಪರಮ ಪೂಜ್ಯ ಶ್ರೀ ಸಿದ್ದರಾಮ ಶಿವಾಚಾರ್ಯರು. ಇಂಗಳೇಶ್ವರ ಹಿರೇಮಠದ ಪೂಜ್ಯಶ್ರೀ ಬೃಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು. ವಡವಡಗಿ ನಂದಿ ಮಠದ ಪೂಜ್ಯಶ್ರೀ ವೀರಸಿದ್ದ ಶಿವಾಚಾರ್ಯರು. ಕಲ್ಕೇರಿ ಗದಗಿ ಮಠದ ಪೂಜ್ಯ ಶ್ರೀ ಮಡಿವಾಳೇಶ್ವರ ಶಿವಾಚಾರ್ಯರು.ದೇವರ ಹಿಪ್ಪರಗಿ ಪರದೇಶಿ ಮಠದ ಪೂಜ್ಯ ಶ್ರೀ ಶಿವಯೋಗಿ ಶಿವಾಚಾರ್ಯರು. ಕೋರವಾರದ ಪೂಜ್ಯಶ್ರೀ ದಾಸಲಿಂಗ ಮಹಾಸ್ವಾಮಿಗಳು. ಬೇಡ ಜಂಗಮ ತಾಲೂಕು ಘಟಕದ ಅಧ್ಯಕ್ಷ ಶರಣಯ್ಯ ಹಿರೇಮಠ. ಬೇಡ ಜಂಗಮ ಹಾಗೂ ಸರ್ವ ಸಮಾಜದ ಗುರು ಹಿರಿಯರು ಇದ್ದರು.

## ಮಾನಸಿಕ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ಸಲಹೆ ಅಗತ್ಯ: ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿ



**ಗುಂಡನಪಲ್ಲೆ :** ಬೆನಕಟ್ಟಿ ಗುಂಡನಪಲ್ಲೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹ ಯೋಗದಲ್ಲಿ ಉಪಕೇಂದ್ರ ಬೆನಕಟ್ಟಿ ವ್ಯಾಪ್ತಿಯ ಗುಂಡನಪಲ್ಲೆ ಗ್ರಾಮದಲ್ಲಿ,"ಮಾನಸಿಕ ಕಾಯಿಲೆಗಳ ನಿವಾರಣೆಗೆ ಆರೋಗ್ಯ ಅರಿವು ಜನ ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು, ಎಲ್ಲರಿಗೂ ಮಾನಸಿಕ ಆರೋಗ್ಯ, ಎಲ್ಲೆಡೆಯೂ ಮಾನಸಿಕ ಆರೋಗ್ಯ ಎಂಬ ಘೋಷಣೆಯೊಂದಿಗೆ, ಆತಂಕ, ಚಿತ್ತ ಚಂಚಲತೆ ಖಿನ್ನತೆ ಬುದ್ಧಿ ಮಾಂದ್ಯತೆ ನಿರ್ಲಕ್ಷ್ಯ ಬೇಡ, ಮೂಢ ನಂಬಿಕೆ ನಂಬಬೇಡಿ, ಮಾನಸಿಕ ಕಾಯಿಲೆಗಳಿಗೆ ವೈಜ್ಞಾನಿಕ ಮಾಹಿತಿ ಚಿಕಿತ್ಸೆ ಸೌಲಭ್ಯಗಳಿವೆ. ಮೂಢ ನಂಬಿಕೆ ,ಆಧುನಿಕ ಜೀವನ ಶೈಲಿಗೆ ಮಾರು ಹೋಗಿ ಮಾನವ ವಿವಿಧ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿದ್ದಾನೆ. ಮಾನಸಿಕ ಕಾಯಿಲೆ ಯಾರಿಗೆ ಬೇಕಾದರೂ ಬರಬಹುದು, ಭಯ ಬೇಡ ಎಚ್ಚರಿಕೆ ಇರಲಿ. ಆತಂಕ, ಸ್ಕಿಜೋಫ್ರೀನಿಯಾ,ಮದ್ಯಪಾನ, ಮೇನಿಯಾ, ಮೂರ್ಛೆ, ಆತ್ಮಹತ್ಯೆ, ಗೀಳು ರೋಗ, ಖಿನ್ನತೆ, ಬುದ್ಧಿ ಮಾಂದ್ಯತೆ, ಮೂರ್ಛೆ ಬೀಳುವುದು, ಅತಿಸಂಶಯ, ಅತಿ ದುಃಖ ಅತೀ ಸಂತೋಷ / ಜಂಭ ಕೊಚ್ಚವುದು, ಬೇರೆಯವರಿಗೆ ಕಾಣಿಸದ ಕೇಳಿಸದ ದೃಶ್ಯ ಧ್ವನಿ ಕಾಣಿಸುವುದು, ಮುಂದಾಗುವುದು ವಿಚಿತ್ರ ವರ್ತನೆ, ಆತ್ಮ ಹತ್ಯೆಯ ಆಲೋಚನೆ ರೋಗ ಲಕ್ಷಣಗಳ ಅನುಸಾರ ವಿಶೇಷ ಮನೋತಜ್ಞ ವೈದ್ಯರ ಸಲಹೆ ಚಿಕಿತ್ಸೆ ಅಗತ್ಯವಿರುತ್ತದೆ ಮದ್ಯಪಾನ ಧೂಮಪಾನ ದುಶ್ಚಟಗಳು ಸೇರಿ ಮಾನವನನ್ನು ನರಕ ಕೂಪಕ್ಕೆ ತಳ್ಳುತ್ತವೆ ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಘನ ಸರ್ಕಾರ ಜಿಲ್ಲಾ ಆಸ್ಪತ್ರೆಯಲ್ಲಿ ಮನೋತಜ್ಞ ವೈದ್ಯರ ಸಲಹೆ ಚಿಕಿತ್ಸೆ ಉಚಿತವಾಗಿರುತ್ತದೆ. ಮಾನಸಿಕ ಕಾಯಿಲೆಗಳಿಂದ ಬಳಲುವ ವ್ಯಕ್ತಿಯನ್ನು ಕುಟುಂಬ ಸದಸ್ಯರು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ ಸೌಲಭ್ಯ ಸದುಪಯೋಗ ಪಡೆದು ಕೊಳ್ಳಬೇಕು.

104 ಟೋಲ್ ಫ್ರೀ ನಂಬರಿಗೆ ಕರೆ ಮಾಡಿ ನಿಮ್ಮ ಆರೋಗ್ಯ ಸಮಸ್ಯೆಗಳಿಗೆ ಸಲಹೆ ಸೂಚನೆ ನಡೆಯಬೇಕು. ಮಾನಸಿಕ ಆರೋಗ್ಯ ಸ್ವಾಸ್ಥ್ಯ ಸಮಾಜ ಕಟ್ಟೋಣ ಎಂದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಮಾನಸಿಕ ಆರೋಗ್ಯ ಕಾಯಿಲೆಗಳ ಆರೋಗ್ಯ ಅರಿವು ಜನ ಜಾಗೃತಿ ಕಾರ್ಯಕ್ರಮದಲ್ಲಿ ಆರೋಗ್ಯ ಅಧಿಕಾರಿಗಳು, ಗ್ರಾಮದ ಹಸನಪ್ಪ ಮೇಲಿನಮನಿ, ಬಸಪ್ಪ ಮಾದರ, ಗದಿಗೆಪ್ಪ ಮಾದರ, ಶಿವಪ್ಪ ಮಾದರ ಗ್ರಾಮದ ಮುಖಂಡರು ಯುವಕರು ಭಾಗವಹಿಸಿದ್ದರು.

## ಕೂಡ್ಲಿಗಿ: ಶ್ರೀ ಮದಗದಾಂಬೆ ದೇವಿ ಗಂಗೆ ದರ್ಶನ, ಧಾರ್ಮಿಕ ಕಾರ್ಯಕ್ರಮ ಸಂಪನ

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ 14 ವಾರ್ಡ ಡಾ? ಬಿ.ಆರ್.ಅಂಬೇಡ್ಕರ್ ನಗರದಲ್ಲಿ, ಶ್ರಾವಣ ಮಾಸದ ಕಡೇ ಮಂಗಳವಾರ ದಂದು. ಶ್ರೀ ಮದಗದಾಂಬೆ ದೇವಿಯನ್ನು ವಿಧಿವತ್ತಾಗಿ, ಗಂಗೆ ದರ್ಶನ ಮಾಡಿಸುವ ಧಾರ್ಮಿಕ ಕಾರ್ಯಕ್ರಮ ಜರುಗಿಸಲಾಗಿದೆ. ಅಂಬೇಡ್ಕರ ನಗರದಲ್ಲಿನ ದೇವಸ್ಥಾನದ ಶ್ರೀಮದಗಾಂಭಿಕ ದೇವಿಯನ್ನು ಧಾರ್ಮಿಕ ನಿಯಮಾನುಸಾರ ಹೊಳೆಗೆ ಹೊರಡಿಸುವುದು,ಪುರಾತನಕಾಲದಿಂದಲೂ ನಡೆದು ಕೊಂಡು ಬಂದಿರುವ ಧಾರ್ಮಿಕ ಸಂಪ್ರದ?ಯವಾಗಿದೆ. ಅಂತೆಯೇ ಡಾ? ಬಿ.ಆರ್. ಅಂಬೇಡ್ಕರ್ ನಗರದಲ್ಲಿ, ಆ 27.. ರಂದು ಮಂಗಳವಾರ ದಂದು. ಅಲ್ಲಿಯೇ ನೆಲೆಸಿರುವ ಶ್ರೀಮದಾಂಭಿಕ ದೇವಿಯನ್ನು, ಹೊಳೆಗೆ ಕರೆ ದೊಯ್ಯುವ ಧಾರ್ಮಿಕ ನೆಲೆ ಗಟ್ಟಿನ ಉತ್ಸವವಾಗಿದೆ. ಗಂಗೆ ದರ್ಶನ ಮಾಡಿಸುವ ಕಾರ್ಯಕ್ರಮವನ್ನು, ಪ್ರತಿ ವರ್ಷದಂತೆ ಶ್ರಾವಣ ಕಡೇ ಮಂಗಳವಾರ ದಂದು. ಸಾವಿರಾರು ಭಕ್ತಾದಿಗಳ ಸಹ ಭಾಗಿತ್ವದಲ್ಲಿ ಪಟ್ಟದ ಪೂಜಾರಿ ಬಸವರಾಜ ಹಾಗೂ ಪೂಜಾರಿ ಅಂಜಿನಪ್ಪ ರವರ ಪೌರೋಹಿತ್ವದಲ್ಲಿ ಜರುಗಿತು.



ಶ್ರೀಮದಗದಾಂಬೆಯ ಗಂಗೆ ದರ್ಶನ ಉತ್ಸವವು, ಧಾರ್ಮಿಕ ನಿಯಮಾನುಸಾರ ಶ್ರದ್ಧೆ ಭಕ್ತಿ ನಿಷ್ಠೆಯಿಂದ ನಡೆಸಲಾಯಿತು. ಗಂಗೆ ದರ್ಶನ ದಂದು ಬೆಳಿಗ್ಗೆಯಿಂದ ರಾತ್ರಿ 10:30 ಗಂಟೆಯವರೆಗೂ, ದೇವಿಯ ಧಾರ್ಮಿಕ ಕಾರ್ಯಕ್ರಮಗಳು ವಿಧಿ ವಿಧಾನದಂತೆ ನಡೆದವು.

ಮಳೆಗಾಲದಲ್ಲಿ ಸಕಾಲಕ್ಕೆ ಮಳೆ ಇಳೆಗೆ ಬರಲೆಂದು, ಹಾಗೂ ಕೆರೆಗಳು ತುಂಬಿ ಕೋಡಿ ಹರಿಯಲೆಂದು ಆಶೀರ್ವಾದ ಕೋರುವ ಸದುದ್ದೇಶ ದಿಂದ. ದೈವಸ್ಥರು ಶ್ರೀಮದಗದಾಂಬೆ ದೇವಿಯನ್ನು, ವಿಧಿ ವಿಧಾನದಂತೆ ಹೊಳೆಗೆ ಹೊರಡಿಸಿ ಗಂಗೆ ದರ್ಶನ ಮಾಡಿಸುವುದು ವಾಡಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಮಳೆ ಬಂದೇ ಬರುತ್ತದೆ, ದೇವಿಯಲ್ಲಿ ಬೇಡಿ–ದ ಬೇಡಿಕೆ ಕೂಡಲೇ ಈಡೇರಿ. ಪೂಜಾ ಸಂದರ್ಭದಲ್ಲಿಯೇ ಧರೆಗೆ ಮಳೆ ಬಂದೇ ಬರುತ್ತದೆ, ಆ ಭರವಸೆ ಯಾವತ್ತಿಗೂ ಹುಸಿ ಯಾಗುವುದಿಲ್ಲ ಎಂಬ ನಂಬಿಕೆ ಭಕ್ತರಲ್ಲಿದೆ. ಮಂಗಳವಾರ ದಂದು ಸಂಜೆ ದೇವಿ ಉತ್ಸವ ಆರಂಭ ಗೊಂಡಾಗಿನಿಂದ, ಮಳೆ ಸುರಿಯಲು ಪ್ರಾರಂಭಿಸಿದೆ. ಮಧ್ಯ ರಾತ್ರಿಯವರೆಗೂ ಬೆಂಬಡದೇ ಮಳೆ ಧಾರಾಕಾರವಾಗಿ ಸುರಿದಿದ್ದು, ಈ ಮೂಲಕ ಭಕ್ತರಲ್ಲಿನ ನಂಬಿಕೆ ಮತ್ತಷ್ಟು ಪುಷ್ಠಿ ನೀಡಿದ ಸನ್ನಿವೇಶ ಜರುಗಿತು. ಈ ಮಹಾ ದಾಶಯದಂತೆ ಆಯಗಾರರ ನಿರ್ದೇಶನ ಹಾಗೂ ನೇತೃತ್ವ ದೊಂದಿಗೆ, ನೂರುರು ಭಕ್ತರು ದೇವಿಯನ್ನು ಹೊಳೆಗೆ ಹೊರಡಿಸುವ ಕಾರ್ಯ ನೆರವೇರಿಸಲಾಯಿತು.

ಕೂಡ್ಲಿಗಿ ಪಟ್ಟಣದ ಪ್ರಮುಖ ನಾಗರಿಕರು ಹಾಗೂ ಎಲ್ಲಾ ಸಮುದಾಯಗಳ ಆಸ್ತಿಕರು, ಸಾಂಪ್ರದಾಯಿಕ ಧಾರ್ಮಿಕ ಶ್ರದ್ಧಾಳುಗಳು. ದೇವಸ್ಥಾನದ ಭಕ್ತ ಮಂಡಳಿ ಮತ್ತು ಆಯಗಾರರು ಜನ ಪ್ರತಿನಿಧಿಗಳು ಮುಖಂಡರು ಹಿರಿಯರು, ಮಹಿಳೆಯರು ಮಕ್ಕಳು ಯುವಕರು ವೃದ್ಧ ರಾಧಿಯಾಗಿ ಸರ್ವರು ಸೌಹಾರ್ಧತೆಯಿಂದ ಧಾರ್ಮಿಕ ಕಾರ್ಯ ನೆರವೇರಿಸಿ ಯಶಸ್ವಿಗೊಳಿಸಿದರು. ಹಲಗೆ ವಾದ್ಯ ಸೇರಿದಂತೆ ವಿವಿಧ ಸಾಂಪ್ರದಾಯಿಕ ವಾದ್ಯಗಳು ಮೊಳಗಿದವು, ವಾದ್ಯ ಕಲಾವಿದರು ತಮ್ಮ ಕಲೆಯನ್ನು ಉತ್ಸವದಲ್ಲಿ ಉತ್ಸುಕತೆಯಿಂದ ಅನಾವರಣ ಗೊಳಿಸಿದರು ಈ ಸಂದರ್ಭದಲ್ಲಿ ಕೇರಿಯ ಮುಖಂಡರಾದ ಎಸ್. ದುರುಗೇಶ್ ಹಾಗೂ ಡಿ.ಎಚ್.ದುರುಗೇಶ್ ವಕೀಲರು ದೇವಿಯ ಕುರಿತು ಮಾತನಾಡಿದ್ದಾರೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ.ಬಿ.ಸಾಲುಮನೆ. ಕೂಡ್ಲಿಗಿ**



ಹುನಗುಂದ ಪುರಸಭೆಯ ನೂತನ ಅಧ್ಯಕ್ಷೆಯಾಗಿ ಭಾಗ್ಯಶ್ರೀ ಬಸವರಾಜ ರೇವಡಿ ಉಪಾಧ್ಯಕ್ಷೆಯಾಗಿ ರಾಜಮ್ಮ ಹನಮಪ್ಪ ಆಯ್ಕೆಯಾಗಿದ್ದಾರೆ.

# ಅಖಂಡ ಭಾರತದ ಸೌಹಾರ್ದತೆಗೆ ಪ್ರತಿಜ್ಞೆ ಸ್ವೀಕಾರ ಅಗತ್ಯ: ಪ್ರೋ ಕುಂಬಾರ



**ಮೂಡಲಗಿ :** ಅಖಂಡ ಭಾರತದ ಸೌಹಾರ್ದತೆ ವಿದ್ಯಾರ್ಥಿಗಳಲ್ಲಿ ಬೆಳಸುವ ಕಾರ್ಯ ಪ್ರಸ್ತುತ ದಿನಗಳಲ್ಲಿ ಅವಶ್ಯಕವಾಗಿದೆ ಭಾರತ ವಿಶ್ವದ ಶಕ್ತಿಯಾಗಿ ಬೆಳೆಯುವಲ್ಲಿ ನಮ್ಮ ಒಗಟ್ಟಿನ ಸಾಮರ್ಥ್ಯದ ಅಗತ್ಯತೆಯನ್ನು ತೋರಿಸುವದಕ್ಕಾಗಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ಸಲುವಾಗಿ ಮತ್ತು ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇದಬಾವವಿಲ್ಲದೇ ಭಾರತದ ಸಮಗ್ರತೆಗೆ ಆಧ್ಯತೆ ನೀಡಬೇಕೆಂದು ಉಪನ್ಯಾಸಕ ಸಂಗಮೇಶ ಕುಂಬಾರ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯ & ಪದವಿ ಮಹಾವಿದ್ಯಾಲಯ, ಶ್ರೀವಿದ್ಯಾನಿಕೇತನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಂದ ಆಯೋಜಿಸಿದ ಸದ್ಬಾವನಾ ದಿನಾಚರಣೆಯಲ್ಲಿ ಮಾತನಾಡಿ ದೇಶದಲ್ಲಿ ಶಾಂತಿ ಐಕ್ಯತೆ ಮತ್ತು ರಾಷ್ಟ್ರದ ಉಳಿವಿಗಾಗಿ ಭಾವನಾತ್ಮಕತೆಯನ್ನು ಹಾಗೂ ವಿಚಾರಶೀಲತೆಗಳನ್ನು ವಿದ್ಯಾರ್ಥಿಗಳಲ್ಲಿ ಬೆಳಸುವುದು ಅಗತ್ಯವಿದೆ ಎಂದರು.

ಶ್ರೀವಿದ್ಯಾನಿಕೇತನ ಪ್ರಾಥಮಿಕ & ಪ್ರೌಢ ಶಾಲೆಯ ಪ್ರಧಾನ ಗುರುಗಳಾದ ಸಂಗಮೇಶ ಹಳ್ಳೂರ ಮಾತನಾಡಿ ಮಕ್ಕಳಲ್ಲಿ ಸತ್ಯ ಶಾಂತಿ ಸಹಬಾಳ್ವೆ ಭಾರತದ ಸಾರ್ವಭೌಮತ್ವ ಮುಂತಾದ ತಾತ್ವಿಕ ಚಿಂತನೆಗಳ ಬೆಳವಣಿಗೆಗೆ ಆಧ್ಯತೆ ನೀಡಬೇಕೆಂದರು. ಪದವಿ ಕಾಲೇಜಿನ ಎನ್.ಎಸ್.ಎಸ್. ಸಂಯೋಜಕ ಪ್ರಕಾಶ ಚೌಡಕಿ ಮಾತನಾಡಿ ದೇಶ ಕಟ್ಟುವ ಸಾಮೂಹಿಕ ಜವಾಬ್ದಾರಿಗಳು ವಿದ್ಯಾರ್ಥಿಗಳಲ್ಲಿ ಬೆಳದು ಬರುವಂತಹ ಚಟುವಟಿಕೆಗಳಲ್ಲಿ ತೊಡುಗುವಂತೆ ಪ್ರೋತ್ಸಾಹಿಸುವುದು ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸದ್ಭಾವನಾ ದಿನಾಚರಣೆ ಪ್ರತಿಜ್ಞೆ ಬೋದಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಉಪನ್ಯಾಸಕರಾದ ಸಂಜೀವ ವಾಲಿ, ಹಣಮಂತ ಚಿಕ್ಕೋಡಿ, ಮಲ್ಲಪ್ಪ ಜಾಡರ, ಎಂ.ಬಿ. ಸಿದ್ನಾಳ, ರವಿ ಕಟಗೇರಿ, ಎಸ್.ಬಿ.ಬೆಳವಿ, ವಾಣಿಶ್ರೀ ಕಾಪಶೆ, ಎಂ.ಎಲ್. ಪೂಜೇರಿ ಅಶ್ವಿನಿ ಬಡಿಗೇರ ಜಿ.ಎಚ್. ಕಡಪಟ್ಟಿ ಮಾಳಪ್ಪ ಕೇದಾರಿ ಹಾಜರಿದ್ದರು.

# ಕೃಷಿ ಪರಿಕರ ಮಾರಾಟಗಾರರಿಗೆ ವಿಸ್ತರಣಾ ಸೇವೆಗಳ ಡಿಪ್ಲೋಮಾದ 4ನೇ ಬ್ಯಾಚನ ಉದ್ಘಾಟನೆ ಸಮಾರಂಭ

**ಮೂಡಲಗಿ :** ವಾಪಾರ ಮನೋಬಾವ ಬಿಟ್ಟು ಸೇವಾ ಮನೋಬಾವದ ಕಡೆ ತಿರುಗಿ ಮತ್ತು ರೈತರಿಗೆ ಸರಿಯಾದ ಸಲಹೆಗಳನ್ನು ನೀಡಬೇಕು ಮತ್ತು ಆಧುನಿಕತೆ & ಯಾಂತ್ರಿಕತೆಯಿಂದ ಭೂಮಿ ಫಲವತ್ತತೆಯು ಕಡಿಮೆ ಆಗುತ್ತಿದೆ ಆದ್ದರಿಂದ ಮಣ್ಣಿನ ಸಂರಕ್ಷಣೆ ಕಡೆ ಗಮನ ಹರಿಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡಿ ಎಂದು ಧಾರವಾಡದ ಕೃಷಿ ವಿಶ್ವ ವಿದ್ಯಾಲಯದ ಮತ್ತು ರಾಜ್ಯ ನೋಡಲ್ ಅಧಿಕಾರಿ ಆಂಇಖಚ ಪ್ರಾಧ್ಯಾಪಕ ಡಾ. ಎಸ್. ಎನ್. ಜಾಧವ ಹೇಳಿದರು

ಸಮೀಪದ ಅರಭಾಂವಿಯ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಭಾರತ ಸರಕಾರ, ಒಂಓಂಉಇ ಹೈದರಾಬಾದ, ಕೃಷಿ ವಿಶ್ವವಿದ್ಯಾಲಯ ಧಾರವಾಡ ಮತ್ತು ಕೃಷಿ ಇಲಾಖೆ, ಆತ್ಮಾ ಯೋಜನೆಯ ಆಶ್ರಯದಲ್ಲಿ ಮಂಗಳವಾರ ಜರುಗಿದ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ



ವಿಸ್ತರಣಾ ಸೇವೆಗಳ ಡಿಪ್ಲೋಮಾದ 4ನೇ ಬ್ಯಾಚನ ಉದ್ಘಾಟಿಸಿ ಮಾತನಾಡಿದರು, ಪರಿಕರ ವಿತರಕರ ಕೃಷಿ ಜ್ಞಾನವನ್ನು ನವೀಕರಿಸುವ ಮತ್ತು ಕೃಷಿ ತಾಂತ್ರಿಕತೆಗಳನ್ನು ವರ್ಗಾಯಿಸುವ ಕಾರ್ಯದಲ್ಲಿ ಪರಿಕರ ವಿತರಕರನ್ನು 'ಪೂರಕ ವಿಸ್ತರಣಾ ಕಾರ್ಯಕರ್ತರಾಗಿ' ಬಳಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಕೃಷಿ ಪರಿಕರ ವಿತರಕರನ್ನು ಪೂರಕ ವಿಸ್ತರಣಾ ಕಾರ್ಯಕರ್ತರನ್ನಾಗಿ ಸಿದ್ದಪಡಿಸಿ ರೈತರಿಗೆ ಉತ್ತಮ ಸೇವೆ ನೀಡುವ ಗುರಿ ಹೊಂದಿದೆ ಎಂದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕಿ ಲೀಲಾವತಿ ಕೌಜಗೇರಿ ಮಾತನಾಡಿ ಪರಿಕರ ಮಾರಾಟಗಾರರು ಕ್ಷೇತ್ರ ಮಟ್ಟದಲ್ಲಿ ರೈತರು ಎದುರಿಸುತ್ತಿರುವ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಮಾತನಾಡಿದರು.

ಅರಭಾಂವಿಯ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಡೀನ್ ಡಾ. ಎಮ್. ಜಿ. ಕೆರುಟಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರ ಜೀವನದ ಆರ್ಥಿಕ ವ್ಯವಸ್ಥೆ ಸುಧಾರಿಸುವಲ್ಲಿ ಕೃಷಿ ಪರಿಕರುಗಳಾದ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಸರಿಯಾದ ಪ್ರಮಾಣ ಹಾಗೂ ಸೂಕ್ತ ಸಮಯದಲ್ಲಿ ಸರಿಯಾದ ನ್ಯಾಯವುತವಾದ ಬೆಲೆಗಳಲ್ಲಿ ಮಾರಲು ಸೂಕ್ತ ಕ್ರಮ ಕೈಗೊಳ್ಳುವುದು ಸುಸ್ಥಿರ ಕೃಷಿಗೆ ನಾಂದಿ ಎಂದು ತಿಳಿಸಿದರು.

ದೇಸಿ ವಿದ್ಯಾರ್ಥಿಗಳು ಮತ್ತು ಮಹಾವಿದ್ಯಾಲಯದ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.ಈ ಕಾರ್ಯಕ್ರಮವನ್ನು ಪ್ರಾರ್ಥನಾ ಗೀತೆಯನ್ನು ಹಾಡುವುದರ ಮುಖಾಂತರ ಪ್ರಾರಂಭಿಸಲಾಗಿತು.

ಡಾ. ದಿಲೀಪಕುಮಾರ ಮಸೂತಿ ದೇಸಿ ಸಂಯೋಜಕರು ಇವರು ಸ್ವಾಗತಿಸಿ ದೇಸಿ ಕೋರ್ಸ ನಡೆದು ಬಂದ ಹಾದಿ ಹಾಗೂ ಅದರ ಪ್ರಾಮುಖ್ಯತೆ ಬಗ್ಗೆ ಪ್ರಾಸ್ತಾವಿಕ ಮಾತನಾಡಿದರು.

ಪ್ರಭಾವತಿ ಅಂಗಡಿ ನಿರೂಪಿಸಿ ಕೊನೆಗೆ ವಂದನಾರ್ಪಣೆ ಮಾಡಿದರು.



## ಸಿದ್ದಾರೂಢರಿಗೆ ವಿಶೇಷ ಅಲಂಕಾರ

**ಮಹಾಲಿಂಗಪುರ : ಸಿದ್ದಾರೂಢರ 95ನೇ ಪುಣ್ಯಾರಾಧನೆ ನಿಮಿತ್ಯ ಸಿದ್ದಾರೂಢರ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಗಿತ್ತು.**

## ಮಹಿಳೆ ಮತ್ತು ಮಕ್ಕಳು ನಾಪತ್ತೆ

**ಬೆಳಗಾವಿ :** ಗೋಕಾಕ ತಾಲೂಕಿನ ತಳಕಟನಾಳ ಗ್ರಾಮದ ವಾಣಿ ಕುದರಿ ಇವಳು ಮಕ್ಕಳಾದ ಪೃಥ್ವಿರಾಜ, ಕೃಷ್ಣಾ ಮತ್ತು ಪಾಯಲ್ ಕುದರಿ ಇವರನ್ನು ಆ. 08 ರಂದು ಮನೆಯಿಂದ ಕರೆದುಕೊಂಡು ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ ಎಂದು ಪತಿ ನಾಗೇಶ ಹಣಮಂತ ಇವನ್ನು ಕುಲಗೋಡ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

ಕಾಣೆಯಾದವರ ವಿವರ: ವಾಣಿ ವಯಸ್ಸು 33 ವರ್ಷ, ಮಕ್ಕಳು 13, 12, 10 ವರ್ಷ ವಯಸ್ಸು ಇರುತ್ತವೆ. ಕಾಣೆಯಾದವರ ಬಗ್ಗೆ ಮಾಹಿತಿ ದೋರೆತಲ್ಲಿ ಕುಲಗೋಡ ಪೋಲೀಸ್ ಠಾಣಾಧಿಕರಿಗಳಿಗೆ ತಿಳಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ

**ಬಾಗಲಕೋಟೆ :** ಉತ್ತರ ಕರ್ನಾಟಕದ ವಿದ್ಯಾರ್ಥಿಗಳಲ್ಲಿ ಆದಮ್ಯ ಶಕ್ತಿ ಇದೆ, ಅದರ ಸದ್ಬಳಕೆ ಆಗುವ ಅನಿವಾರ್ಯತೆ ಇದೆ ಎಂದು ಬಿ.ವ್ಹಿ. ವ್ಹಿ ಸಂಘದ ಆಡಳಿತ ಅಧಿಕಾರಿಗಳಾದ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಹೇಳಿದರು.

ಅವರು ಬಿ.ವಿ.ವಿ.ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ 2024–25ನೇ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಆಗಮನ ಮತ್ತು ನಿರ್ಗಮನಕ್ಕೆ ಬಹಳ ಮಹತ್ವವಿದೆ. ಉತ್ತರ ಕರ್ನಾಟಕ ವಿದ್ಯಾರ್ಥಿಗಳಿಗೆ ಆದಮ್ಯ ಶಕ್ತಿಯಿದ್ದು. ತಮ್ಮಲ್ಲಿನ ಪ್ರತಿಭೆಯನ್ನು ಅನಾವರಣಗೊಳಿಸಿ, ನಕಾರಾತ್ಮಕ ವಿಚಾರಗಳಿಂದ ದೂರವಿದ್ದು ಸಕಾರಾತ್ಮಕ ಭಾವನೆಗಳನ್ನು



ಬೆಳಸಿಕೊಂಡು ಸಚಾರಿತ್ರ್ಯವಂತರಾಗಬೇಕು, ನಿಮ್ಮ ಭವಿಷ್ಯಕ್ಕೆ ನೀವೇ ನಿರ್ಮಾತೃಗಳು ಎಂದರು.

ಮಹಾವಿದ್ಯಾಲಯದ ಪ್ರಾಚಾರ್ಯರ ಡಾ.ಜಗನ್ನಾಥ ಚವ್ಹಾಣ ಅವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ವೇದಿಕೆಯ ಮೇಲೆ ಐ.ಕ್ಯೂ.ಎ.ಸಿ ಸಂಯೋಜಕರಾದ ಶ್ರೀಮತಿ ಗಿರಿಜಾ ನಾವದಿಗಿ, ಸಿಬ್ಬಂದಿ ಕಾರ್ಯದರ್ಶಿಗಳಾದ ಡಾ.ಎಂ ನಂಜುಂಡಸ್ವಾಮಿ ಸಾಂಸ್ಕೃತಿಕ ಚಟುವಟಿಕೆಗಳ ವಿಭಾಗದ ಸಂಯೋಜಕ ಆರ್ ಪಿ ಮೇಲಿನಮನಿ, ದೈಹಿಕ ನಿರ್ದೇಶಕ ಎಸ್ ಎಸ್ ಕೋಟ್ಯಾಳ ವಿದ್ಯಾರ್ಥಿಗಳ ಪ್ರತಿನಿಧಿಯಾದ ವೈಷ್ಣವಿ ದೇಸಾಯಿ, ಪರೇಶ, ಕೀರ್ತಿ ಕಿತ್ತಲಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪಿ ಎಚ್ ಡಿ ಪದವಿ ಪಡೆದ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ರವಿ ಬಳಿಗೇರಿ ಅವರಿಗೆ ಹಾಗೂ ಕರ್ನಾಟಕ ರಾಜ್ಯ ಅರ್ಹತಾ (KSET)ಪರೀಕ್ಷೆಯಲ್ಲಿ ಉತ್ತೀರ್ಣರಾದ ಶ್ರೀಮತಿ ಟೀನಾ ದರ್ಬಾರ ಅವರಿಗೆ ಮತ್ತು ಯುನಿವರ್ಸಿಟಿ ಬ್ಲೂಗಳಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ವರ್ಷದವೂದ್ದಕ್ಕೂ ಕ್ರೀಡೆ ಸಂಸ್ಕೃತಿಕ ಹಾಗೂ ವಿವಿಧ ಘಟಕಗಳಿಂದ ನಡೆಸಿದ ಸ್ಪರ್ಧಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು, ನೀಡಲಾಯಿತು.

ರಾಜು ಮೇಲಿನಮನಿಸ್ವಾಗತಿಸಿದರು. ಡಾಬಸವರಾಜ ವ್ಹಿ. ಖೋತ ಮುಖ್ಯ ಅತಿಥಿಗಳು ಅಧ್ಯಕ್ಷರನ್ನು ಪರಿಚಯಿಸಿದರು. ಡಾ. ಎಂ. ಎಂ. ಹುದ್ದಾರ ಅವರು ಮಹಾವಿದ್ಯಾಲಯದ ಕ್ರೀಡೆ, ಸಾಂಸ್ಕೃತಿಕ ಹಾಗೂ ವಿವಿಧ ವಿಭಾಗಗಳ ವರದಿ ವಾಚನ ಮಾಡಿದರು.

ಡಾ. ಎಸ್ ಎಸ್ ಕೋಟ್ಯಾಳ ವಂದಿಸಿದರು. ಕುಮಾರಿ ಗೌರಮ್ಮ ಕೆಂಗಲಗುತ್ತಿ ಕಾರ್ಯಕ್ರಮ ನಿರೂಪಿಸಿದರು. ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಉಪನ್ಯಾಸಕರ ಸಂಘಕ್ಕೆ ಅವಿರೋಧ ಆಯ್ಕೆ



**ರಬಕವಿ–ಬನಹಟ್ಟಿ :** ಪದವಿ ಪೂರ್ವ ಉಪನ್ಯಾಸಕರ ಸಂಘಕ್ಕೆ ರಬಕವಿ–ಬನಹಟ್ಟಿ ತಾಲೂಕಾಧ್ಯಕ್ಷರಾಗಿ ರಬಕವಿಯ ಎಂ. ವಿ. ಪಟ್ಟಣ ಪದವಿ ಪೂರ್ವ ಮಹಾವಿದ್ಯಾಲಯದ ಅರ್ಥಶಾಸ್ತ್ರ ಉಪನ್ಯಾಸಕ ರಾಜೇಶ ಪಿ. ನೋಟದ ಅವಿರೋಧವಾಗಿ ಇತ್ತೀಚೆಗೆ ಆಯ್ಕೆಯಾಗಿದ್ದಾರೆ.

# ಚಿಮ್ಮಡ ಕಿಚಡಿ ಜಾತ್ರೆ ಅದ್ದೂರಿ ಆಚರಣೆಗೆ ನಿರ್ಧಾರ ಪ್ರಭುಲಿಂಗೇಶ್ವರ ಜಾತ್ರೆಯ ಸೇವಾ ಕಾರ್ಯಕ್ಕೆ ಚಾಲನೆ

**ಚಿಮ್ಮಡ :** ಈ ಭಾಗದಲ್ಲಿ ಕಿಚಡಿ ಜಾತ್ರೆಯಂದೇ ಪ್ರಸಿದ್ಧಿ ಪಡೆದ ಚಿಮ್ಮಡ ಶ್ರೀ ಪ್ರಭುಲಿಂಗೇಶ್ವರ ಜಾತ್ರೆಯನ್ನು ಈ ಬಾರಿ ವಿಶಿಷ್ಟ ರೀತಿಯಲ್ಲಿ ಅಧ್ದೂರಿಯಿಂದ ಆಚರಿಸಲು ಸೇವಕರ ಸಭೆಯಲ್ಲಿ ನಿರ್ಧರಿಸಲಾಯಿತು.

ಸ್ಥಳಿಯ ವಿರಕ್ತಮಠದ ಚನ್ನ ಬಸವೇಶ್ವರ ಸಭಾ ಮಂಟಪದಲ್ಲಿ ಗುರುವಾರ ಕರೆಯಲಾಗಿದ್ದ ಜಾತ್ರಾ ಸೇವಕರ ಸಭೆಯ ಸಾನಿಧ್ಯವಹಿಸಿದ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ ಭಕ್ತಾದಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಭಕ್ತರಿಗೆ ಯಾವುದೇ ತರಹದ ತೊಂದರೆಯಾಗದಂತೆ ನಾವೆಲ್ಲ ನೋಡಿಕೊಳ್ಳಬೇಕಾಗಿದೆ. ಜಾತ್ರೆ ಮುಗಿಯುವವರೆಗೆ ಗ್ರಾಮದ ಪ್ರತಿಯೊಬ್ಬರು ಜಾತಿ, ಧರ್ಮ, ಶ್ರೀಮಂತಿಕೆಯನ್ನು ಪಕ್ಕಕ್ಕಿಟ್ಟು ಪ್ರಭುವಿನ ಸೇವಕರಾಗಿ ದುಡಿದಲ್ಲಿ ಮಾತ್ರ ಪ್ರಭುವಿನ ಕೃಪೆಗೆ



ಪಾತ್ರರಾಗುತ್ತೇವೆ, ಇದರಿಂದ ಧನ್ಯತಾಭಾವ ಸಿಗಲಿದೆ ಈ ಕುರಿತು ಪ್ರತಿಯೊಬ್ಬ ಹಿರಿಯ ಸೇವಕರು ತಮ್ಮ ಮಕ್ಕಳನ್ನು ಶುಕ್ರವಾರ ಬೆಳಿಗ್ಗೆ 10.ಘಂ.ಗೆ ಶ್ರೀ ಮಠದಲ್ಲಿ ನಡೆಯುವ ಸಭೆಗೆ ಕಳಿಸಿದರೆ ಜಾತ್ರೆ ನಿರ್ವಹಣೆಯ ರೂಪುರೇಷೆ ತಯಾರಿಸಲಾಗುವುದು ಎಂದರು.

ಭಕ್ತಾಧಿಗಳಿಗೆ ಪ್ರಸಾದ ವಿತರಣೆಯಲ್ಲಿ ವ್ಯತೆಯಾಗದಂತೆ ಜಾಗರೂಕತೆ ವಹಿಸಬೇಕೆಂದು ಗ್ರಾಮದ ಪ್ರಮುಖ ಅಡಿವೆಪ್ಪಾ ಬಿ;ಪಾಟೀಲ ಸಭೆಯಲ್ಲಿ ಸಲಹೆ ನೀಡಿದರು.

ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಪ್ರಭು ಪಾಲಭಾವಿ ಮಾತನಾಡಿದರು.

ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದ ಟ್ರಷ್ಟ ಸಮೀತಿಯ ಅಧ್ಯಕ್ಷ ರಾಮಣ್ಣ ಮುಗಳಖೋಡ, ಪ್ರಮುಖರಾದ ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಣ್ಣ ಬಗನಾಳ, ಬಿ.ಎಸ್. ಪಾಟೀಲ, ಶಂಕರ ಬಟಕುರ್ಕಿ, ಬೀರಪ್ಪಾ ಹಳೆಮನಿ, ಬಸವರಾಜ ಕುಂಚನೂರ, ಶಂಕರ ಪಾಟೀಲ, ಅಶೋಕ ಧಡೂತಿ, ಚಂದ್ರಕಾಂತ ಜಾಡಗೌಡರ, ಗುರಪ್ಪಾ ಬಳಗಾರ, ಪ್ರಭು ನೇಸೂರ, ಈಶ್ವರ ಬಡಿಗೇರ, ರಾಚಯ್ಯ ಮಠಪತಿ, ಸೇರಿದಂತೆ ಹಲವಾರು ಜನ ಪ್ರಮುಖರು ಸೇರಿದಂತೆ ಗ್ರಾಮದ ಎಲ್ಲ ಸಮುದಾಯಗಳ ಸಾವಿರಾರು ಜನ ಸೇವಕರು ಈ ಸಂಧರ್ಬದಲ್ಲಿ ಉಪಸ್ಥಿತರಿದ್ದರು.

# ಶಂಕರ ಶಿವಾಚಾರ್ಯರು ಹಾಕಿ ಕೊಟ್ಟ ಮಾರ್ಗ ಮನುಕುಲಕ್ಕೆ ಮಾದರಿ



**ರಬಕವಿ :** ಜಗದ್ಗುರು ಲಿಂಗೈಕ್ಯ. ಶ್ರೀ ಶಂಕರ ಶಿವಾಚಾರ್ಯ ಶ್ರೀಗಳ ಜೀವನ ಹಾಗೂ ತತ್ವ ಸಿದ್ಧಾಂತಗಳು ನಮಗೆಲ್ಲರಿಗೂ ಆದರ್ಶ. ಅವರು ತೋರಿಸಿ ಕೊಟ್ಟ ಮಾರ್ಗ ಮನುಕುಲಕ್ಕೆ ಮಾದರಿ ಎಂದು ಹಳೇ ಹುಬ್ಬಳ್ಳಿ ಹಾಗೂ ಹೊಸೂರಿನ ಶ್ರೀ ವೀರಬಿಕ್ಷಾವರ್ತಿ ನೀಲಕಂಠ ಮಠದ ಜಗದ್ಗುರು ಶ್ರೀ ಶಿವಶಂಕರ ಶಿವಾಚಾರ್ಯರು ಹೇಳಿದರು.

ಸಮೀಪದ ಹೊಸೂರಿನ ಶ್ರೀ ನೀಲಕಂಠ ಮಠದಲ್ಲಿ ಜರುಗಿದ ಲಿಂಗೈಕ್ಯ ಜಗದ್ಗುರು ಶಂಕರ ಶಿವಾಚಾರ್ಯ ಶ್ರೀಗಳ 18 ನೇ ಪುಣ್ಯಾರಾಧನೆ ಸಮಾರಂಭದಲ್ಲಿ ಅವರು ಮಾತನಾಡಿ, ಶಂಕರ ಶ್ರೀಗಳು ಅಧ್ಯಾತ್ಮ, ಶಿಕ್ಷಣ ಹಾಗೂ ದಾಸೋಹದ ಮೂಲಕ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಶ್ರೀಗಳು ಅನೇಕ ಪವಾಡಗಳನ್ನು ಮಾಡುವ ಮೂಲಕ ಭಕ್ತರನ್ನು ಉದ್ಧರಿಸಿ ಬದುಕಿನ ಸರಳತೆ ಕಂಡು ಶರೀರ ಭೌತಿಕವಾಗಿ ಕಾಣದೆ ಇರಬಹುದು. ಆದರೆ ಅವರು ನಮ್ಮೊಂದಿಗೆ ಸದಾ ಇದ್ದಾರೆ ಎಂದರು. ಪ್ರತಿಯೊಬ್ಬರು ಮಠ ಮಂದಿರ ಅಧ್ಯಾತ್ಮ ಹಾಗೂ ಸತ್ಸಂಗದಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕಾಗವಾಡದ ಯತೀಶ್ವರಾನಂದ ಶ್ರೀಗಳು ಹೇಳಿದರು. ವೇದಿಕೆಯ ಮೇಲೆ ಹೊಸೂರಿನ ಪರಮಾನಂದ ಶ್ರೀಗಳಿದ್ದರು. ಸಮಾರಂಭದಲ್ಲಿ ಅನೇಕರು ಉಪಸ್ಥಿತರಿದ್ದರು.

# ನಿರಂತರ ಉದ್ಯೋಗಕ್ಕಾಗಿ ಸೂಕ್ತ ಕ್ರಮದ ಸೂಚನೆ

**ರಬಕವಿ–ಬನಹಟ್ಟಿ :** ಕೆ. ಎಚ್. ಡಿ. ಸಿ. ನಿಗಮದ ನೇಕಾರರಿಗೆ ನಿರಂತರ ಉದ್ಯೋಗವನ್ನು ನೀಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಆಗಸ್ಟ್ ಕೊನೆಯವರೆಗೆ ಕಚ್ಚಾ ನೂಲಿನ ಪೂರೈಕೆ ಮಾಡಲಾಗಿದೆ. ಇನ್ನೂ ಮುಂದಿನ ಆರು ತಿಂಗಳ ಕಾಲಾವಧಿಯವರೆಗೆ ಕಚ್ಚಾ ನೂಲು ಖರೀದಿಗೂ ಟೆಂಡರ್ ಕರೆಯಲಾಗಿದೆ ಎಂದು ಕೆ. ಎಚ್. ಡಿ. ಸಿ. ನಿಗಮದ ವ್ಯವಸ್ಥಾಪಕ ನಿರ್ದೇಶಕ ವರ್ಗಿಸ್ ನೇಗಿ ತಿಳಿಸಿದರು.

ಅವರು ಗುರುವಾರ ಇಲ್ಲಿನ ಕೆ. ಎಚ್. ಡಿ. ಸಿ. ನಿಗಮಕ್ಕೆ ಭೇಟಿ ನೀಡಿ ನೇಕಾರ ಮುಖಂಡರ ಜೊತೆಗೆ ನಿಗಮದ ಸಮಸ್ಯೆಗಳ ಕುರಿತು ಚರ್ಚೆ ಮಾಡಿ ಮಾತನಾಡಿದರು.

ಇನ್ನು ಇಲ್ಲಿಯ ನೇಕಾರ ಕುಟುಂಬಗಳು ವಾಸಿಸುತ್ತಿರುವ ಮನೆಗಳಿಗೆ ಹಕ್ಕು ಪತ್ರ ವಿತರಣೆ ಕುರಿತು ಮಾತನಾಡಿದ ಅವರು, ಇದು ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಕೆ. ಎಚ್. ಡಿ. ಸಿ. ನಿಗಮ ಸೇರಿದಂತೆ ಮೂರೂ ಇಲಾಖೆಗಳ



ಅಧಿಕಾರಿಗಳು ಕಾರ್ಯ ಮಾಡಬೇಕಾಗಿದೆ. ಈಗಾಗಲೇ ನಿಗಮದ ಅಧಿಕಾರಿಗಳು ಸಂಬಂಧಪಟ್ಟ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ನೀಡಿದ್ದಾರೆ. ಒಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಕೆ. ಎಚ್. ಡಿ. ಸಿ. ನೇಕಾರರ ಅಭಿವೃದ್ಧಿಗೆ ಸರ್ಕಾರ ಮತ್ತು ನಿಗಮವು ಬದ್ಧವಾಗಿದೆ ಎಂದು ನೇಗಿ ತಿಳಿಸಿದರು.

ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ಮಾತನಾಡಿ, ಇಲ್ಲಿಯ ಕಾರ್ಮಿಕರು ತಮ್ಮ ಅಳಿವು ಉಳಿವಿಗಾಗಿ ಹಲವಾರು ಹೋರಾಟಗಳನ್ನು ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇಲ್ಲಿಯ ನೇಕಾರರು ವಾಸಿಸಲು ಆರಂಭಿಸಿ 37 ವರ್ಷ ಗತಿಸಿದರೂ ಇದುವರೆಗೂ ಅವರಿಗೆ ಹಕ್ಕು ಪತ್ರ ದೊರೆತಿಲ್ಲ. ಇದರಿಂದಾಗಿ ಅವರಿಗೆ ಬಹಳಷ್ಟು ಸಮಸ್ಯೆಯಾಗಿದೆ.

ಇನ್ನು ಇಲ್ಲಿಯ 55 ವರ್ಷ ಮೇಲ್ಪಟ್ಟ ನೇಕಾರರಿಗೆ ರೂ. ಐದು ಸಾವಿರ ಮಾಸಾಶನ ಮತ್ತು ಕಾರ್ಮಿಕ ಸೌಲಭ್ಯಗಳು ದೊರೆಯುವಂತೆ ಕ್ರಮ ತೆಗೆದುಕೊಳ್ಳಬೇಕು. ನಿಗಮದಲ್ಲಿ ನಡೆದ ನೂರಾರು ಕೋಟಿ ರೂ. ಮೊತ್ತದ ಹಗರಣದ ಕುರಿತು ಮತ್ತೊಮ್ಮೆ ಮರು ತನಿಖೆಯಾಗಬೇಕು ಎಂದು ತಿಳಿಸಿದರು.

ಮತ್ತೋರ್ವ ನೇಕಾರ ಮುಖಂಡ ಸದಾಶಿವ ಗೊಂದಕರ ಮಾತನಾಡಿ, ಕೆ. ಎಚ್. ಡಿ. ಸಿ. ಯ ನೂರು ನೇಕಾರರಿಗೆ ನಿವೇಶನ ನೀಡುವ ನಿಟ್ಟಿನಲ್ಲಿ ನಿಗಮ ಗಮನ ನೀಡಬೇಕು ಮತ್ತು ನಿರಂತರವಾಗಿ ಉದ್ಯೋಗ ನೀಡಬೇಕು ಎಂದು ತಿಳಿಸಿದರು.

ಸ್ಥಳೀಯ ಕೆ. ಎಚ್. ಡಿ. ಸಿ. ನಿಗಮದ ಅಧಿಕಾರಿ ವಿಜಯಕುಮಾರ ಚಲವಾದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಸಪ್ಪ ಅಮಟಿ, ವಸಂತ ಪೋರೆ, ಶಂಕರ ಬಾಡಗಿ, ಶ್ರೀಶೈಲ ಮುಗಳೊಳ್ಳಿ, ಮಲ್ಲಿಕ್ ಜಮಾದರ, ಮಲ್ಲಿಕಾರ್ಜುನ ಜೋತಾವರ ಸೇರಿದಂತೆ ಅನೇಕರು ಹಾಜರಿದ್ದರು.

## ಮಾಹೇಶ್ವರಿ ಸಮಾಜದ ಮಹಿಳೆಯರಿಂದ ತೀಜ್ ಆಚರಣೆ



**ಬನಹಟ್ಟಿ :** ಇಲ್ಲಿನ ಮಾಹೇಶ್ವರಿ ಸಮಾಜದ ಮಹಿಳೆಯರು ಬುಧವಾರ ಸಂಜೆ ಸ್ಥಳೀಯ ಬಾಲಾಜಿ ಮಂದಿರದಲ್ಲಿ ಬೇವಿನ ಟೊಂಗೆಗಳಿಗೆ ಪೂಜೆ ಸಲ್ಲಿಸುವ ಮೂಲಕ ತೀಜ್ ಕಾರ್ಯಕ್ರಮವನ್ನು ನಡೆಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷೆ ಸುಶೀಲಾ ಕಾಬ್ರಾ ಮಾತನಾಡಿ, ತೀಜ್ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಆಚರಿಸುವ ಹಬ್ಬವಾಗಿದೆ. ತೀಜ್ ಆಚರಣೆ ಎಲ್ಲರ ಬದುಕು ಉತ್ತಮವಾಗಿ ಇರಲಿ ಎಂಬ ನಂಬಿಕೆಯಿಂದ ಆಚರಣೆ ಮಾಡಲಾಗುತ್ತದೆ ಎಂದರು. ಮಹಿಳೆಯರು ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು. ನಂತರ ದೇವರಿಗೆ ಉಂಡಿಯ ನೈವೇದ್ಯ ಸಲ್ಲಿಸಿದರು. ಸಮಾಜದ ಮಹಿಳೆಯರು ಉಪವಾಸ ವೃತ ಕೈಗೊಂಡು ರಾತ್ರಿ ಚಂದ್ರನ ದರ್ಶನ ಪಡೆದುಕೊಂಡ ನಂತರ ಭೋಜನ ಸ್ವೀಕರಿಸುವುದು ವಿಶೇಷವಾಗಿದೆ.

ಈ ಸಂದರ್ಭದಲ್ಲಿ ನೂತನ ಕಾಬ್ರಾ, ಗಾಯತ್ರಿ ಭೂತಡಾ, ನಿರ್ಮಲಾ ಚಿಂಡಕ, ಮೋಹಿನಿಬಾಯಿ ರಾಠಿ, ಶಾಮಲಾ ಚಿಂಡಕ, ತಾರಾ ಡಾಗಾ, ಕಲ್ಪನಾ ಚಿಂಡಕ, ಚಂಪಾಬಾಯಿ ಪಾಂಚಾರಿಯಾ, ಹೇಮಾ ಚಿಂಡಕ, ನೀತಾ ರಾಠಿ, ರೇಖಾ ಡಾಗಾ, ಗೀತಾ ಭಟ್ಟಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಡಿ. ದೇವರಾಜ ಅರಸು ಜನ್ಮದಿನಾಚರಣೆ




**ಧಾರವಾಡ** : ದೇವರಾಜ ಅರಸು ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಬಡವರ, ಹಿಂದುಳಿದವರ ನಿಂತು ಸಾಮಾಜಿಕ ಮತ್ತು ಮೂಲಭೂತ ಅವಶ್ಯಕತೆಗಳನ್ನುಒದಗಿಸಿದವರು, ಇವರು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ, ಲಕ್ಷಾಂತರ ವಿದ್ಯಾರ್ಥಿ ವಸತಿ ನಿಲಯಗಳನ್ನು ಕಟ್ಟಿಸಿಕೊಟ್ಟವರು ಇವರು, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತಿದ ಇವರು ತಮ್ಮ ಅಧಿಕಾರದ ಸಂದರ್ಭದಲ್ಲಿ ಸಮಾಜದಲ್ಲಿದ್ದಂತಹ ಎಲ್ಲ ವರ್ಗದವರ ಪರವಾಗಿ ಶ್ರಮಿಸಿದರು ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಹೇಳಿದರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾದ ಡಿ. ದೇವರಾಜು ಅರಸು ಅವರ 109 ನೇ ಜನ್ಮ ದಿನಾಚರಣೆಯ ಅಂಗವಾಗಿ ಡಿ. ದೇವರಾಜು ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ದೇವರಾಜು ಅರಸು ಅವರಂತಹ ವ್ಯಕ್ತಿಗಳು ಇದ್ದಾಗ ಮಾತ್ರ ಸಮಾಜ ಸುಧಾರಣೆ-ಯಾಗುತ್ತದೆ. ದೇವರಾಜು ಅರಸು ಅವರು ಕ್ರಾಂತಿಕಾರಿ ಹೋರಾಟಗಾರರಾಗಿದ್ದರು. ನಾವು ಮಾಡುತ್ತಿರುವಂತ ಕಾಯಕದ ಬಗ್ಗೆ ಕೀಳರಿಮೆ ಪಡಬಾರದು. ದೇವರಾಜು ಅರಸರ ಪ್ರತಿಯೊಂದು ತತ್ವ, ಆದರ್ಶಗಳನ್ನು ಪಾಲಿಸೋಣ, ಅವರ ಕೆಲವೊಂದು ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಡಿ.ದೇವರಾಜು ಅರಸು ಪ್ರಶಸ್ತಿ ಪುರಸ್ಕೃತ ಶಶಿಧರ ತೋಡಕರ ಮಾತನಾಡಿದರು. ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ನಾಗರಾಜ ಎಸ್ ಅವರು ಡಿ.ದೇವರಾಜು ಅರಸು ಅವರ ಶೈಕ್ಷಣಿಕ ಜೀವನದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನೀಡಿದರು.

ಕಾರ್ಯಕ್ರಮದಲ್ಲಿ ಡಿ. ದೇವರಾಜು ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕುಶಾಲ್,

ನಾಮ ನಿರ್ದೇಶಿತ ಸದಸ್ಯ ಗುರುನಾಥ ಹುಲಗಾರ, ಅಲೆಮಾರಿ ಸಮುದಾಯದ ಮುಖಂಡ ರಾಜು ವೇಲಕರ, ಈಶ್ವರ ಬೆಳ್ಳಿಗಟ್ಟಿ ಇದ್ದರು. ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಗೋಪಾಲ ಲಮಾಣಿ ಅವರು ಅಥಿತಿಗಳ ಪರಿಚಯ ಮಾಡಿದರು. ರವಿ ಕುಲಕರ್ಣಿ ಅವರು ಕಾರ್ಯಕ್ರಮವನ್ನು ನಿರೂಪಿಸಿ, ಗೀತಾ ಹೂಗಾರ ಅವರು ವಂದಿಸಿದರು.

# ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮ




**ಹುಬ್ಬಳ್ಳಿ** : ಭಾರತದಾದ್ಯಂತ ಅದ್ದೂರಿಯಾಗಿ ಆಚರಿಸುವ ಹಬ್ಬವಾದ ಶ್ರೀ ಕೃಷ್ಣಜನ್ಮಾಷ್ಟಮಿ ಅಂಗವಾಗಿ ಅಗಷ್ಟ್ 25, 26 ಹಾಗೂ 27 ರಂದು ಹು-ಧಾ ಮಧ್ಯೆದಲ್ಲಿರುವ ರಾಯಾಪುರ ಬಳಿಯ ಇಸ್ಕಾನ್‌ದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹು-ಧಾ ಇಸ್ಕಾನ್ ಅಧ್ಯಕ್ಷರಾದ ರಾಜೀವ್ ಲೋಚನ ದಾಸ್ ಹೇಳಿದರು.

ನಗರದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತಾನಾಡಿದ ಅವರು, ಅ, 25 ರಂದು ಮುಂಜಾನೆ 8 ಗಂಟೆಯಿಂದ ರಾತ್ರಿ9 ಗಂಟೆಯವರೆಗೆ ಅರ್ಚನೆ ಮತ್ತು ಆರತಿಗಳು ದೇವಸ್ಥಾನದ ಮುಖ್ಯ ಸಭಾಂಗಣದಲ್ಲಿ ನಡೆಯಲಿದ್ದು, 10,30 ಕ್ಕೆ ಲಡ್ಡುಗೋಪಾಲ ಮೂರ್ತಿಯನ್ನು ಉಯ್ಯಾಲೆ ಮೇಲೆ ತೂಗಲು ಭಕ್ತರಿಗೆ ಅವಕಾಶ, ಸಂಜೆ ಹು-ಧಾ ದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿದ್ದು, ರಾತ್ರಿ 8.30 ರಿಂದ 9.30 ರ ವರೆಗೆ ಅಭಿಷೇಕವು ನೆರವೇರಲಿದೆಂದರು.

ಬಸ್ ಸೌಲಭ್ಯ: ಇಡೀ ದಿನ ಹಾಗೂ ಮಧ್ಯರಾತ್ರಿಯವರೆಗೂ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವ ನಡೆಯುವ ಹಿನ್ನಲೆಯಲ್ಲಿ ಭಕ್ತರ ಅನುಕೂಲಕ್ಕಾಗಿ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಬಸ್ ಸೌಲಭ್ಯಗಳನ್ನು ನೀಡುವಂತೆ ಆಯಾ ಸಂಸ್ಥೆಯವರೆಗೆ ಕೋರಲಾಗಿದೆ.

ಭಕ್ತಾದಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಹಾಗೂ ದೇವಸ್ಥಾನದ ಬಳಿ ಮೂರು ಕಡೆ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

# ಬ್ರಹ್ಮಶ್ರೀ ನಾರಾಯಣಗುರು ಜಯಂತಿ




**ಧಾರವಾಡ** : ಕೇರಳ ರಾಜ್ಯದಲ್ಲಿ ಜಾತಿ, ಮತ ಭೇದಗಳು ಹೆಚ್ಚಾಗಿದ್ದ ಕಾಲದಲ್ಲಿ ನಾರಾಯಣ ಗುರು ಎಂಬ ಒಬ್ಬ ಸಮಾಜ ಸುಧಾರಕ ಉದಯಿಸಿ, ಸಮಾಜದ ತಾರತಮ್ಯಗಳನ್ನು ತೆಗೆದುಹಾಕಲು ತಮ್ಮ ಇಡಿ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವರು ಹೇಳಿದ ತತ್ವ ಜಗತ್ತಿನಲ್ಲಿ ಇರುವುದು ಒಂದೇ ಜಾತಿ, ಒಂದೇ ಮತ ಹಾಗೂ ಒಂದೇ ದೇವರು ಎಂಬ ಸತ್ಯ ವಾಕ್ಯವನ್ನು ಪ್ರತಿಪಾದಿಸಿದ್ದರು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹೇಳಿದರು.

ಅವರು ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾದ ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ ಪ್ರಯುಕ್ತ ಬ್ರಹ್ಮ ಶ್ರೀ ನಾರಾಯಣ ಗುರು

ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾರಾಯಣಗುರು ಅವರು 1850 ರಂದು ಕೇರಳದಲ್ಲಿ ನಾರಾಯಣ ಗುರು ಅವರು ಜನಿಸಿದರು. ಇದೇ ಸಮಯದಲ್ಲಿ ಅಲ್ಲಿ ಜಾತಿ, ಧರ್ಮ, ಮೇಲು, ಕೀಳು ತಾರತಮ್ಯ ಹೆಚ್ಚು ಸಮಾಜದಲ್ಲಿ ಕಾಡುತಿತ್ತು, ನಾರಾಯಣ ಗುರುಗಳು ಜನ್ಮ ತಾಳಿ ಅಲ್ಲಿನ ಸಮಾಜದಲ್ಲಿ ಇದ್ದಂತಹ ಪಿಡಗನ್ನು ಕಿತ್ತೊಗೆಯಲು ತಮ್ಮ ಜೀವನವನ್ನು ಮುಡಿಪಾಗಿಟ್ಟದ್ದರು ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಮಹಾಪೌರರಾದ ರಾಮಪ್ಪ ಕೃಷ್ಣಪ್ಪ ಬಡಿಗೇರ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರ್ಯ ಈಡಿಗ ಸಂಘದ ಅಧ್ಯಕ್ಷ ಚಂದ್ರಶೇಖರ ಢವಳಗಿ, ಹುಬ್ಬಳ್ಳಿ-ಧಾರವಾಡ ಹಿತವರ್ದಕ ಸಂಘದ ಅಧ್ಯಕ್ಷ ತಿಮ್ಮಪ್ಪ. ಡಿ ನಾಯ್ಕ, ಶಂಕರ ಕೋಟಿ, ಬಸವರಾಜ ಇಳಗೇರಿ, ಮಂಜುನಾಥ ಇಳಗೇರಿ ಇದ್ದರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಕುಮಾರ ಬೇ-ಕ್ಕೇರಿ ಅವರು ಸ್ವಾಗತಿಸಿದರು, ಆರತಿ ದೇವಶಿಕಾಮಣಿ ಅವರು ಕಾರ್ಯಕ್ರಮವನ್ನು ನೀರೂಪಿಸಿ, ವಂದಿಸಿದರು.

# ನವಲಗುಂದ: ರಾಜ್ಯಕ್ಕೆ ದ್ವಿತೀಯ ಸ್ಥಾನ



**ನವಲಗುಂದ** : ಸಿವಿಲ್ ಹಾಗೂ ಜೆ.ಎಂ. ಎಫ್.ಸಿ ನ್ಯಾಯಾಲಯದ ಸಿಬ್ಬಂದಿ ಚಿದಾನಂದ ಸಂಕನಗೌಡ್ರ ಇವರು ವೇಟ್ ಲಿಪ್ಟಿಂಗ್ ವಿಭಾಗದಲ್ಲಿ, 106 ಕೆ.ಜಿ. ಭಾರವನ್ನು ಎತ್ತುವದರ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ನ್ಯಾಯಾಲಯಗಳ ಕೀರ್ತಿ ತಂದಿದ್ದಾರೆ ಎಂದು ದಿವಾಣಿ ನ್ಯಾಯಾಲಯದ ನ್ಯಾಯಾಧೀಶರುಗಳಾದ ಮಂಜುನಾಥ್ ಪಾನಗಂಟಿ ಹಾಗೂ ನವೀನ ಡಿಸೋಜಾ ಹೇಳಿದರು.

ಮಂಗಳವಾರ ಸಂಕನಗೌಡ್ರ ರವರನ್ನು ಸನ್ಮಾನಿಸಿ ಮಾತನಾಡಿದ ಅವರು ಕರ್ನಾಟಕ ರಾಜ್ಯ ಸರಕಾರಿ ನೌಕರರು ಹಮ್ಮಿಕೊಂಡಿದ್ದ 2024ನೆ ಸಾಲಿನ ಕ್ರೀಡಾಕೂಟದಲ್ಲಿ ಚಿದಾನಂದ ಇನ್ನೂ ಅತ್ಯುನ್ನತ ಸ್ಥಾನಕ್ಕೇರಲಿ ಎಂದು ಪ್ರೊತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ನ್ಯಾಯಾಲಯದ ಎಲ್ಲ ಸಿಬ್ಬಂದಿಗಳು, ನ್ಯಾಯವಾದಿಗಳು ಹಾಗೂ ತಾಲೂಕ ಕಾನೂನು ಸೇವಾ ಸಮಿತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜಿಲ್ಲಾ ಆಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀಚೌಧರಿ ಭೇಟಿ

## ಶುದ್ಧ ಕುಡಿಯುವ ನೀರು, ಮೂಲಸೌಕರ್ಯ ಒದಗಿಸಲು ಸೂಚನೆ

**ಬೆಳಗಾವಿ** : ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಶುದ್ಧ ಕುಡಿಯುವ ನೀರು, ಬೀದಿದೀಪ ವ್ಯವಸ್ಥೆಯನ್ನು ತಕ್ಷಣವೇ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌಧರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಳಗಾವಿಯ ಜಿಲ್ಲಾ ಆಸ್ಪತ್ರೆ ಹಾಗೂ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಬಿಮ್ಸ್)ಗೆ ಭೇಟಿ ನೀಡಿದ ಅವರು, ಮೂಲಸೌಕರ್ಯಗಳನ್ನು ಪರಿಶೀಲಿಸಿದರು.

ಶುದ್ಧ ಕುಡಿಯುವ ನೀರು, ಬೀದಿದೀಪ ವ್ಯವಸ್ಥೆಯನ್ನು ಸರಿಪಡಿಸಬೇಕು; ಹೊರ ರೋಗಿಗಳ ವಿಭಾಗದಲ್ಲಿ ಶೌಚಾಲಯ ವ್ಯವಸ್ಥೆ ಒದಗಿಸಬೇಕು; ಕರ್ತವ್ಯನಿರತ



ವೈದ್ಯರಿಗೆ ಸುಸಜ್ಜಿತ ವಿಶ್ರಾಂತಿ ಕೊಠಡಿಯನ್ನು ಕಲ್ಪಿಸಬೇಕು ಎಂದು ತಿಳಿಸಿದರು.

ಇದಲ್ಲದೇ ಮಹಿಳೆಯರು, ಮಕ್ಕಳ ಭದ್ರತೆ ದೃಷ್ಟಿಯಿಂದ ಅಗತ್ಯವಿರುವ ಎಲ್ಲ ಕಡೆಗಳಲ್ಲೂ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಕೂಡ ಅಳವಡಿಸುವಂತೆ ಡಾ.ನಾಗಲಕ್ಷ್ಮೀ ತಿಳಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಬಿಮ್ಸ್ ನಿರ್ದೇಶಕರಾದ ಅಶೋಕ ಶೆಟ್ಟಿ ಅವರು, ಸಂಸ್ಥೆಯ ಕುರಿತು ಮಾಹಿತಿಯನ್ನು ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕೋಣಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ನಾಗರಾಜ ಸೇರಿದಂತೆ ಆರೋಗ್ಯ ಇಲಾಖೆಯ ವಿವಿಧ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



**ಅವಳಿ-ಜವಳಿ ಕರುಗಳಿಗೆ ಜನ್ಮ ನೀಡಿದ ಆಕಳು.!**

**ಬೆಟಗೇರಿ:ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ರೈತ ಶಿವಲಿಂಗಪ್ಪ ಕಲ್ಲಪ್ಪ ಮುಧೋಳ ಅವರು ಸಾಕಿದ ಎಚ್‌ಎಫ್ ತಳಿಯ ಆಕಳು ಇತ್ತೀಚೆಗೆ ಎರಡು(ಅವಳಿ-ಜವಳಿ)ಕರುಗಳಿಗೆ ಜನ್ಮ ನೀಡಿ ನೋಡುಗರಲ್ಲಿ ಆಶ್ಚರ್ಯ ಮೂಡಿಸಿದೆ. ಎರಡು ಕರುಗಳು ಆರೋಗ್ಯವಾಗಿವೆ.**

# ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಅಧಿಕಾರಿಗಳಿಗೆ ಚಳಿ ಬಿಡಿಸಿದ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ

**ಮುಧೋಳ** : ಸ್ಮಶಾನ-ಶೌಚಾಲಯಕ್ಕೆ ಹೆಚ್ಚು ಆದ್ಯತೆ ನೀಡಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಶೌಚಾಲಯ ಹಾಗೂ ಸ್ಮಶಾನ ಜಾಗದ ಸಮಸ್ಯೆಗಳಿದ್ದರೆ ಕೂಡಲೇ ಬಗೆಹರಿಸಿ. ಬಯಲು ಮುಕ್ತ ಶೌಚಾಲಯಕ್ಕೆ ಈಗಾಗಲೇ 7ಕೋಟಿ 50 ಲಕ್ಷ ರೂ. ಹಣವನ್ನು ಸಿ.ಎಸ್. ಆರ್. ಫಂಡಿನಲ್ಲಿ ನೀಡಿದ್ದೇವೆ. ಇನ್ನೂ ಬೇಕಾದಲ್ಲಿನನ್ನಗಮನಕ್ಕೆತನ್ನಿ. ಈ ವಿಷಯದಲ್ಲಿ ಉದಾಸೀನತೆ ತೋರಿದರೆ ಸಂಬಂಧಿಸಿದ ಅಧಿಕಾರಿಗಳನ್ನೆ ಹೊಣೆಗಾರರನ್ನಾಗಿಸಿ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪುರ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ನಗರದ ತಾಲೂಕು ಪಂಚಾಯಿತಿ ಕಚೇರಿ ಸಭಾಭವನದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವರ್ಚಗಲ್ಲದಲ್ಲಿ ವರ್ಷದ ಹಿಂದೆ ಆರಂಭಗೊಂಡಿರುವ ಶೌಚಾಲಯ ಕಾಮಗಾರಿ ಇನ್ನೂ ಮುಗಿದಿಲ್ಲ. ಹೀಗಾದರೆ ನಾವು ಸಾರ್ವಜನಿಕರಿಗೆ ಏನು ಉತ್ತರ ಹೇಳಬೇಕು ಎಂದು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಪಂಚಾಯತ ಅಧಿಕಾರಿಯಾಗಿ ಹತ್ತು ವರ್ಷದಿಂದ ಇಲ್ಲಿಯೇ ಕೆಲಸ ಮಾಡುತ್ತಿರುವ ನೀವು ಪ್ರತಿಯೊಂದು ಗ್ರಾಮದ ಬಗ್ಗೆ ಕಾಳಜಿ ವಹಿಸಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ ಅಧಿಕಾರಿಗೆ ತಿಳಿಸಿದರು.

ನಗರ ಮಟ್ಟದಲ್ಲಿ ಶೌಚಾಲಯ ನಿರ್ಮಾಣಕ್ಕೆ ಸ್ಥಳದ ಅಭಾವವಿದ್ದರೆ ಮೊಬೈಲ್ ಶೌಚಾಲಯ ವ್ಯವಸ್ಥೆ ಮಾಡಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿ ಎಂದು ಪೌರಾಯುಕ್ತ ಗೋಪಾಲ ಕಾಸಿ ಅವರಿಗೆ ಸೂಚಿಸಿದರು.

ಸ್ಮಶಾನದ ಕುರಿತು ಗ್ರಾಮೀಣ ಪ್ರದೇಶದಲ್ಲಿರುವ ಭೂವ್ಯಾಜ್ಯಗಳ ಕುರಿತು ತಹಸೀಲ್ದಾರರು ಹೆಚ್ಚಿನ ಆಸಕ್ತಿ ವಹಿಸಿ ಸ್ಮಶಾನ ನಿರ್ಮಾಣಕ್ಕೆ ಮುತುವರ್ಜಿ ವಹಿಸಬೇಕು ಮೂಲಭೂತ ಸೌಲಭ್ಯವನ್ನು ನೀಡುವಲ್ಲಿ ಸರಕಾರ ಹಿಂದೆ ಉಳಿಯಬಾರದು.

ನಗರಸಭೆ ಪೌರಾಯುಕ್ತ ಗೋಪಾಲ ಕಾಸಿ ಮಾತನಾಡಿ, ನಗರ ವ್ಯಾಪ್ತಿಯಲ್ಲಿ 739 ಆಸ್ತಿ ಗುರುತಿಸಿ ಆಸ್ತಿ ತೆರಿಗೆ ವಸೂಲಿಗೆ ಕ್ರಮ ಕೈಗೊಂಡಿದ್ದೇವೆ. 58 ವ್ಯಾಪಾರ ಮಳಿಗೆಗಳು ಖಾಲಿಯಿದ್ದು, 10ಕ್ಕೆ ಬಿಡ್ ದಾರರು ಬಂದಿಲ್ಲ ಬಾಡಿಗೆ ಕಡಿಮೆ ಮಾಡಲು ಜಿಲ್ಲಾಧಿಕಾರಿಗೆ ಪ್ರಸ್ತಾಪವನೆ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ಮಳಿಗೆಗಳು ಬಹಳ ವರ್ಷಹಳಿಂದ ಖಾಲಿಯಿರುವ ಕಾರಣ ದುರಸ್ತಿಗೆ ಬಂದಿರುತ್ತವೆ ಅವುಗಳನ್ನು ದುರಸ್ತಿಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ನಗರಸಭೆ ಆಸ್ತಿ ಬಗ್ಗೆ ನಿಷ್ಕಾಳಜಿ ವಹಿಸಿದರೆ ಸಹಿಸುವುದಿಲ್ಲ. ಈ ಬಗ್ಗೆ ಜಾಗೃತೆಯಿಂದ ಕಾರ್ಯನಿರ್ವಹಸಬೇಕು ಎಂದರು.

ಕೇವಲ ಶೇ.5 ನೀರಿನ ಕರ ವಸೂಲಿ ಮಾಡಿದರೆ ನಗರಸಭೆ ನಡೆಸುವುದು ಹೇಗೆ. ಕರವಸೂಲಿ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಪೌರಾಯುಕ್ತರಿಗೆ ತಿಳಿಸಿದರು.

ಪೌರಾಯುಕ್ತ ಕಾಸಿ ಮಾತನಾಡಿ, ಶೇ.32 ರಷ್ಟು ಟ್ರೇಡ್‌ಲೈಸನ್ಸ್‌ವಸೂಲಿಯಾಗಿದೆ. ಏಪ್ರಿಲ್‌ತನಕ ಅವಧಿಯಿರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಣದ ತೆರಿಗೆ ವಸೂಲಿಯಾಗಲಿದೆ ಎಂದು ಮಾಹಿತಿ ಹಂಚಿಕೊಂಡರು.

ಈ ವೇಳೆ ಮಾತನಾಡಿದ ಸಚಿವ ತಿಮ್ಮಾಪುರ, ಅವಧಿ ಮೀರುವವರೆಗೆ ಕಾಯದೆ ಹೆಚ್ಚಿನ ಆದ್ಯತೆ ನೀಡಿ ಅವಧಿಯೊಳಗೆ ಕರ ವಸೂಲಿಗೆ ಮುಂದಾಗಿ ಎಂದು ಸಲಹೆ ನೀಡಿದರು.

ನಗರದಲ್ಲಿ ಸಮುದಾಯ ಭವನಗಳ ಬಗ್ಗೆ ಬೆಳಕು ಚೆಲ್ಲಿದ ಪೌರಾಯುಕ್ತ ನಗರಸಭೆಯಿಂದ ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಿ ನಿವೇಶನ ನೀಡಲಾಗಿದೆ ಎಂದು ತಿಳಿಸುತ್ತಿದ್ದಂತೆ ಗರಂ ಆದ ತಿಮ್ಮಾಪುರ, ಅವರಿಗೆ ಯಾವ



ಕಾನೂನಿನಡಿ ನಿವೇಶನಹಂಚಿಕೆ ಮಾಡಿದ್ದೀರಿ, ಅದರಿಂದ ನಗರಸಭೆಗೇನು ಲಾಭ ಎಂದು ಪ್ರಶ್ನಿಸಿದರು. ಈ ಬಗ್ಗೆ ಹಿಂದಿನ ಸಭೆಯಲ್ಲಿಯೇ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೆ ಇದೂವರೆಗೆ ಕ್ರಮವಾಗಿಲ್ಲ ಈ ಪುರುಷಾರ್ಥಕ್ಕೆ ಯಾಕೆ ಸಭೆ ನಡೆಸಬೇಕು ಎಂದು ಬೇಸರ ಹೊರಹಾಕಿದರು.

ನಿರ್ಮಿತಿ ಕೇಂದ್ರದ ಅಧಿಕಾರಿ ಮೇಲೆ ಗರಂ ಆದ ಸಚಿವ ತಿಮ್ಮಾಪೂರ ಸ್ಮಶಾನದಲ್ಲಿ ಕೆಲಸ ಆಗಿದೆ ಎಂದು ಎರಡೇರಡು ಬಾರಿ ಬಿಲ್ ತೆಗೆದ ವಿಷಯ ನನ್ನ ಗಮನಕ್ಕೆ ಬಂದಿದೆ ಇವರ ಮೇಲೆ ಸೂಕ್ತ ಕ್ರಮಕೈಗೊಳ್ಳಿ ಎಂದು ಸ್ಥಳದಲ್ಲಿಯೇ ಇದ್ದ ಜಿಲ್ಲಾಧಿಕಾರಿಗಳಿಗೆ ಆದೇಶಿಸಿದರು.

ನಿರ್ಮಿತಿ ಕೇಂದ್ರದ ಅಧಿಕಾರಿ ಮಾತನಾಡಿ, 8 ಅಂಗನವಾಡಿಗಳ ಕಾಮಗಾರಿ ಪೂರ್ಣಗೊಂಡಿದೆ. 1 ಆಸ್ಪತ್ರೆ ಕಾಮಗಾರಿಗಳು ಸಿದ್ದಗೊಂಡಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಹೆಸ್ಕಾಂ ಇಂಜಿನಿಯರ್ ವೀರಣ್ಣ ಮರಿಕಟ್ಟಿ ಮಾತನಾಡಿ, ರೈತರಿಗೆ ಒಟ್ಟು 35ಟಿಸಿಗೆ ಅರ್ಜಿ ಬಂದಿವೆ 5 ಕೆಲಸ ಮಾಡಲಾಗಿದೆ. 6 ಪ್ರಗತಿ ಹಂತದಲ್ಲಿವೆ ಎಂದು ಮಾಹಿತಿ ನೀಡಿದರು.

ಸೋಲಾರ್ ವಿದ್ಯುತ್ ಉತ್ತೇಜನ ದೃಷ್ಟಿಯಿಂದ ಸದ್ಯಕ್ಕೆ ಸರ್ಕಾರದ ವತಿಯಿಂದ ವಿದ್ಯುತ್ ಪರಿವರ್ತಕ ನೀಡುತ್ತಿಲ್ಲ. ಮುಂದಿನ ದಿನಗಳಲ್ಲಿ ಮಾರ್ಗಸೂಚಿ ಬಂದರೆ ಪಾಲಿಸಲಾಗುವುದು ಎಂದರು.

ಹಲವು ಸಮಸ್ಯೆಗಳಿಂದ ಸೋಲಾರ್ ಪವರ್ ಬಗ್ಗೆ ರೈತರಲ್ಲಿ ಆಸಕ್ತಿ ಬೆಳೆಯುತ್ತಿಲ್ಲ. ತಾಲೂಕಿನಲ್ಲಿ 73 ಅರ್ಜಿಗಳು ಮಾತ್ರ ರಿಜಿಸ್ಟರ್ ಆಗಿವೆ ಎಂದು ಸಭೆಗೆ ತಿಳಿಸಿದರು. ಈ ವೇಳೆ ಮಾತನಾಡಿದ ಸಚಿವ ತಿಮ್ಮಾಪುರ, ಸೋಲಾರ್ ಬಗ್ಗೆ ಹೆಚ್ಚಿನ ಪ್ರಚಾರ ಅಗತ್ಯವಿದೆ ಈ ಬಗ್ಗೆ ನನ್ನನ್ನೂ ಒಳಗೊಂಡು ರೈತರೊಂದಿಗೆ ಸಭೆ ಕರೆಯಲು ಸೂಚನೆ ನೀಡಿದರು.

ಹೆಬ್ಬಾಳದಲ್ಲಿ ಕೆಇಬಿಗೆ ಸಂಬಂಧಿಸಿದಂತೆ ಹೈಟೆನ್ಸನ್‌ಕಂಬನೆಡಲು7ರೈತರವಿರೋಧವಿದೆ. ಅವರನ್ನು ಮನವೊಲಿಸಲು ಮುಂದಾಗಿದ್ದೇವೆ. ಮುಂದಿನ ದಿನಗಳಲ್ಲಿ ಅಂತಹ ರೈತರ ಮನವೊಲಿಸಿ ಕಂಬ ನೆಡಲು ಮುಂದಾಗುತ್ತೇವೆ ಅಧಿಕಾರಿಗಳು ಸಭೆಗೆ ತಿಳಿಸಿದರು.

ವಿಕಲಚೇತರ ಕಲ್ಯಾಣಾಧಿಕಾರಿ ಮುದ್ನೂರ ಮಾತನಾಡಿ, ತಾಲೂಕಿನಲ್ಲಿ 3864 ಅಧಿಕೃತ ಯುಡಿಐಡಿ ಸಂಖ್ಯೆ ಹೊಂದಿರುವ ವಿಕಲಚೇತರಿದ್ದಾರೆ. 168 ಯಂತ್ರಚಾಲಿತ ವಾಹನ ಹಾಗೂ 114 ವಾಟರ್ ಬೇಡ್ 142 ಹೇರಿಂಗ್ ಮಶೀನ್, 102 ವ್ಹೀಲ್ ಚೇರ್ ಬೇಕು ಎಂದು ವಿನಂತಿಸಿದಾಗ ತಾಲೂಕ ಪಂಚಾಯತಿಯಲ್ಲಿ ಇರುವ 8 ಲಕ್ಷ 60 ಸಾವಿರ ಹಣವನ್ನು ವಿಕಲ ಚೇತನ ಕಲ್ಯಾಣ ಇಲಾಖೆಗೆ ನೀಡಿ ಎಂದು ಆದೇಶಿಸಿಸಿದ ಸಚಿವರು ಸರಕಾರದ ಎಲ್ಲಾ ಇಲಾಖೆಯಲ್ಲೂ ಖಡ್ಡಾಯವಾಗಿ ವ್ಹೀಲ್ ಚೇರ್ ಇರಬೇಕೆಂದು ಹೇಳಿದರು.

ತಹಸೀಲ್ದಾರ್ ವಿನೋದ ಹತ್ತಳ್ಳಿ ಮಾತನಾಡಿ, ಅಕ್ರಮ ಸಕ್ರಮದೊಳಗೆ ಮನೆ ಮಾಡಿಕೊಂಡವರಿಗೆ ಮುಂದಿನ ದಿನದಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದ್ದೇವೆ. ಬರಗಿ, ಹಲಗಲಿಯಲ್ಲಿ ಖಾಸಗಿ ಜಾಗದಲ್ಲಿ ಮನೆ ನಿರ್ಮಾಣ ಮಾಡಲಾಗಿದೆ. ಅವುಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ತಾಲೂಕಿನಲ್ಲಿ 38 ಕೆರೆಗಳಿದ್ದು ಅವುಗಳಲ್ಲಿ 15 ಕೆರೆ ಒತ್ತುವರಿಯಾಗಿವೆ. ನಗರದ 3 ಕೆರೆಗಳ ಪೈಕಿ 2 ಒತ್ತುವರಿಯಾಗಿದೆ. ದತ್ತಾತ್ರೇಯ ಕೆರೆ 3.11 ಗುಂಟೆ ಎಕರೆ ಒತ್ತುವರಿಯಾಗಿದೆ ತಿಳಿಸಿದರು. ಈ ವೇಳೆ ಮಾತನಾಡಿದ ತಿಮ್ಮಾಪುರ, ಬಿವಿವಿ ಸಂಘದವರಿಂದ ದತ್ತ ಕೆರೆ ಸುತ್ತ ಕಾಂಪೌಂಡ್ ನಿರ್ಮಿಸಿದ್ದಾರೆ. ನಗರಸಭೆ ವತಿಯಿಂದ ಸರ್ವೇ ಮಾಡಿಸಿ. ಅದೇ ರೀತಿ ಸಿದ್ದರಾಮೇಶ್ವರ ಕೆರೆ ಒತ್ತುವರಿ ತೆರವಿಗೆ ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗದೇ ತಕ್ಷಣ ಕ್ರಮ ಕೈಗೊಳ್ಳಿ ಎಂದು ಸೂಚನೆ ನೀಡಿದರು.

ಅಬಕಾರಿ ಇಲಾಖೆಯ ರಾಜು ಹೊಸಮನಿ ಮಾತನಾಡಿ ಶಿರೋಳ ಬಳಿ 8 ಕೆ.ಜಿ. ಗಾಂಜಾ ಕೇಸಿನ ಜಾಡು ಹಿಡಿದು ಹೆಚ್ಚಿನ ಪ್ರಮಾಣದ ಗಾಂಜಾ ವಶಪಡಿಸಿಕೊಂಡಿದ್ದೇವೆ ಎಂದು ತಿಳಿಸಿದರು. ತಿಮ್ಮಾಪುರ ಮಾತನಡಿ, ಪೊಲೀಸರ ಸಮನ್ವಯದೊಂದಿಗೆ ಗಾಂಜಾ, ಡ್ರಗ್ಸ್ ನಂತಹ ಮಾದಕ ವಸ್ತುಗಳ ಪತ್ತೆ ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಇನ್ನು ಹಲವು ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ಆ.17 ಶನಿವಾರ ನಡೆಸುವ ಸಭೆಯಲ್ಲಿ ಚರ್ಚಿಸಲು ನಿರ್ಧರಿಸಲಾಯಿತು. ಜಿಲ್ಲಾಧಿಕಾರಿ ಜಾನಕಿ ಕೆ.ಎಂ., ತಾಪಂ ಆಡಳಿತಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ತಹಸೀಲ್ದಾರ್ ವಿನೋದ ಹತ್ತಳ್ಳಿ, ತಾಪಂ ಇಒ ಸಂಜೀವ ಹಿಪ್ಪರಗಿ ಸೇರಿದಂತೆ ಇತರರು ಇದ್ದರು.

ವರ್ಗಾವಣೆ ತಡೆಯುವಾಗಿರುವ ಪ್ರಭಾವ ಮಾಡುವ ಕೆಲಸದಲ್ಲಿರಲಿ : ವರ್ಗಾವಣೆಯಾಗುತ್ತದೆ ಎಂಬ ಸುಳಿವು ಸಿಕ್ಕರೆ ಸಾಕು ಇಲ್ಲಿಯೇ ಉಳಿದುಕೊಳ್ಳಲು ಎಲ್ಲಿಲ್ಲದ ಪ್ರಭಾವ ಬಳಸುವ ನೀವು, ಮಾಡುವ ಕೆಲಸದಲ್ಲಿ ಆ ಪ್ರಭಾವವನ್ನು ಬಳಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ ಎಂದು ಸಚಿವ ಆರ್.ಬಿ.ತಿಮ್ಮಾಪುರ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯವರಿಗೆ ಹೇಳಿದರು. ಇಂಗಳಗಿಯಲ್ಲಿ ಒಂದು ಸಮಾಜ ಕಲ್ಯಾಣ ಇಲಾಖೆಯ ಕಟ್ಟಡಕ್ಕೆ ಅಲ್ಲಿನ ಜನರು ಅಡೆತಡೆಯುಂಟು ಮಾಡುತ್ತಿದ್ದಾರೆ ಎಂದು ಅಧಿಕಾರಿ ಸಚಿವರ ಮುಂದೆ ಹೇಳಿಕೊಂಡಾಗ ಸಚಿವರು ಗರಂ ಆಗಿ ಮೇಲಿನಂತೆ ಹೇಳಿದರು. ಸಾರ್ವಜನಿಕರಿಗೆಅನುಕೂಲಕಲ್ಪಿಸುವನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ಎಂದು ತಿಳಿಸಿದರು.

ಅನಾಥಮಕ್ಕಳ ಬಗ್ಗೆ ಸರ್ವೇ ಮಾಡಿ : ಬೆಳಗಲಿಯಲ್ಲಿ ಅನಾಥ ಮಕ್ಕಳು ಎಷ್ಟು ಜನರಿದ್ದಾರೆ ಎಂದು ಸಚಿವರು ಅಲ್ಲಿನ ಪಟ್ಟಣ ಪಂಚಾಯಿತಿ ಅಧಿಕಾರಿಗೆ ಪ್ರಶ್ನಿಸಿದಾಗ ಅಧಿಕಾರಿ ಅಲ್ಲಿ ಯಾವುದೇ ರೀತಿಯ ಅನಾಥ ಮಕ್ಕಳಿಲ್ಲ ಎಂದು ಹಾರಿಕೆ ಉತ್ತರ ನೀಡಿದರು. ಅವರ ಉತ್ತರದಿಂದ ಆಕ್ರೋಶಗೊಂಡ ಸಚಿವರು ನಿಮಗೆ ಮಾಹಿತಿ ಇಲ್ಲದಿದ್ದರೆ ಗೊತ್ತಿಲ್ಲ ಎಂದು ಹೇಳಿ ಅದುಬಿಟ್ಟು ಹಾರಿಕೆ ಉತ್ತರ ನೀಡಬೇಡಿ. ನಾನೇ ಖುದ್ದಾಗಿ ಭೇಟಿ ನೀಡಿದಾಗ ಅಲ್ಲಿನ ಅಮಾಥ ಮಕ್ಕಳ ಬಗ್ಗೆ ಮಾಹಿತಿ ದೊರೆತಿದೆ. ಕೂಡಲೇ ಈ ಬಗ್ಗೆ ಸರ್ವೇ ಮಾಡಿ ವರದಿ ನೀಡಬೇಕು ಎಂದು ಸೂಚನೆ ನೀಡಿದರು.

# ವಿಜೃಂಭಣೆಯ ರಾಯರ ಆರಾಧನೆ



**ರಬಕವಿ :** ಇಲ್ಲಿ ರಾಯರ 357 ನೇ ಆರಾಧನಾ ಮಹೋತ್ಸವ ಸಂಭ್ರಮದಿಂದ ನಡೆಯಿತು.
ಆರಾಧನೆ ಅಂಗವಾಗಿ ಮಠದಲ್ಲಿರುವ ಬೃಂದಾವನವನ್ನು ಬೆಳ್ಳಿಯ ಆಭರಣಗಳಿಂದ ಮತ್ತು ಹೂ ಮಾಲೆಗಳಿಂದ ಶೃಂಗರಿಸಲಾಗಿತ್ತು. ನಂತರ ನಗರದ ಪ್ರಮುಖ ಬೀದಿಗಳಲ್ಲಿ ರಾಘವೇಂದ್ರರ ಭಾವಚಿತ್ರದ ಮೆರವಣಿಗೆ ನಡೆಯಿತು.
ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರರ ನೇತೃತ್ವದಲ್ಲಿ ಮಹಾಮಂಗಳಾರುತಿ ನಡೆಯಿತು.
ಸಾಹಿತಿ ಸಿದ್ಧರಾಜ ಪೂಜಾರಿ ಮಾತನಾಡಿ, ರಾಯರ ಆರಾಧನೆ ಮಹೋತ್ಸವವು ಪೂರ್ವಾರಾಧನೆ, ಮಧ್ಯಾರಾಧನೆ ಮತ್ತು ಉತ್ತರಾಧನೆ ಈ ಮೂರು ರೀತಿಗಳಲ್ಲಿ ನಡೆಯುತ್ತದೆ ಎಂದರು.
ನಗರದ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಸಮಿತಿ ಅಧ್ಯಕ್ಷ ಬಾಲಚಂದ್ರ ಉಮದಿ (ಅಣ್ಣನವರು) ವಹಿಸಿದ್ದರು. ಡಾ. ಎ. ಆರ್. ಬೆಳಗಲಿ, ಸಂಜಯ ತೆಗ್ಗಿ, ಬಸವರಾಜ ಗುಡೋಡಗಿ, ರಾಮಣ್ಣ ಹುಲಕುಂದ, ಧರೆಪ್ಪ ಉಳ್ಳಾಗಡ್ಡಿ, ಶ್ರೀಶೈಲ ದಲಾಲ, ಗಜಾನನ ನಾಗರಾಳ, ಚಿದಾನಂದ ಗಾಳಿ, ಡಾ. ರವಿ ಜಮಖಂಡಿ, ಪ್ರಕಾಶ ಪರಕಾಳಿ, ರಾಘವೇಂದ್ರ ತೇಲಿ ಸೇರಿದಂತೆ ಮಠದ ಸಮಿತಿ ಸದಸ್ಯರು ಭಾಗವಹಿಸಿದ್ದರು.

# ಯಶಸ್ವಿಯಾಗಿ ಜರುಗಿದ ರಾಯರ ಮಧ್ಯಾರಾಧನೆ

**ಹಾರೂಗೇರಿ:**ಪಟ್ಟಣದವಿವೇಕಾನಂದನಗರದಲ್ಲಿರುವ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ 353 ನೇ ಆರಾಧನಾ ಮಹೋತ್ಸವದ ಎರಡನೇ ದಿನದ ಮಧ್ಯಾರಾಧನೆ ಮಹೋತ್ಸವವು ಹುರುಪು, ಹುಮ್ಮಸ್ಸಿನಿಂದ ರಾಯರ ಭಕ್ತರಿಂದ ಅತ್ಯಂತ ವಿಜೃಂಭಣೆಯಿಂದ ಜರುಗಿತು.
ರಾಯರ ಮೂರ್ತಿಗೆ ಹೂವಿನ ವಿಶೇಷ ಅಲಂಕಾರದೊಂದಿಗೆ ಮಹಾಪೂಜೆ, ಮಂಗಳಾರತಿ, ಹೋಮ ಹಾಗೂ ನೈವೇದ್ಯೆಯನ್ನು ಹಾರೂಗೇರಿ ಉತ್ತರಾದಿ ಮಠದ ವ್ಯವಸ್ಥಾಪಕ ಆಚಾರ್ಯರಾದ ಮುರಲೀಧರಆಚಾರ್ಯರುನೆರವೇರಿಸಿದರು.ನಂತರ ಮುರಲೀಧರಆಚಾರ್ಯರುಮಾತನಾಡಿಭಕ್ತರಸಕಲ ಇಷ್ಟಾರ್ಥಗಳನ್ನು ನೆರವೇರಿಸುವ ಗುರು ರಾಘವೇಂದ್ರ ಸ್ವಾಮಿಗಳು ಸಶರೀರರಾಗಿ ಬೃಂದಾವನಸ್ಥರಾಗಿ 353 ವರ್ಷಗಳು ಸಂದ ಹಿನ್ನೆಲೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು.
ಕುಡಚಿ ಮತಕ್ಷೇತ್ರದ ಶಾಸಕ ಮಹೇಂದ್ರ ತಮ್ಮಣ್ಣವರ ಶ್ರೀರಾಯರ ಮಠಕ್ಕೆ ಆಗಮಿಸಿ ಶ್ರೀಮಠದ ಭಕ್ತರಿಂದ ಸತ್ಕಾರ ಸ್ವೀಕರಿಸಿ ರಾಯರ ದರ್ಶನಾಶೀರ್ವಾದ ಪಡೆದುಕೊಂಡರು. ಆರಾಧನೆಗೆ ಆಗಮಿಸಿದ ರಾಯರ ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸುರಭಿ ಸಂಗೀತ ಶಾಲೆಯ ವಿದ್ಯಾರ್ಥಿನಿ ಸುರಭಿ ಮೊಕಾಶಿ ಇವಳಿಂದ ರಾಯರ ಭಕ್ತಿ ಸಂಗೀತ ಕಾರ್ಯಕ್ರಮ ಜರುಗಿತು.
ಇದೇ ಸಂದರ್ಭದಲ್ಲಿ ಪುರಸಭೆ ಸದಸ್ಯ ಆನಂದ ಪಾಟೀಲ, ಡಾ. ಪ್ರಸಾದ ಕುಲಕರ್ಣಿ, ಕೃಷ್ಣ ಕುಲಕರ್ಣಿ, ಗೋಪಾಲ ನಾಯಿಕ, ಶ್ರೀನಿವಾಸ ಕುಲಕರ್ಣಿ, ವಾದಿರಾಜ ದೇಶಪಾಂಡೆ, ರಾವಜೀ ಪಾಟೀಲ, ಶ್ರೀಧರ್ ಲೋಕಾಪುರ, ರಾಘು ದೇಶಪಾಂಡೆ, ಅನಿಲ ಕುಲಕರ್ಣಿ,ಪ್ರಭಾಕರ ಕುಲಕರ್ಣಿ, ದತ್ತಾತ್ರೇಯ ಪಾಟೀಲ, ಮಧು ಕುಲಕರ್ಣಿ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು.

## ವಿದ್ಯಾರ್ಥಿನಿಯರಿಗೆ ಹೆಲ್ತ್ ಅಂಡ್ ಹೈಜೀನ್ ಪ್ಯಾಡ್ ವಿತರಣೆ

**ಕೊಪ್ಪಳ :** ನಗರದ ಸರ್ಕಾರಿ ಹಿರಿಯ ಪ್ರಾಥ ಎಕ್ಸಮಿಕ ಶಾಲೆಯ ವಿದ್ಯಾರ್ಥಿನಿಯರಿಗೆ ಅವರ ಆರೋಗ್ಯದ ಹಿತದೃಷ್ಟಿಯಿಂದ ಕೊಪ್ಪಳ ಇನ್ನರ್ವಿಲ್ ಕ್ಲಬ್ ವತಿಯಿಂದ ಹೆಲ್ತ್ ಅಂಡ್ ಹೈಜೀನ್ ಪ್ಯಾಡ್ ಅನ್ನು ವಿತರಿಸಲಾಯಿತು. ಸದರಿ ಸರಳ ಸಾಂಕೇತಿಕ ಕಾರ್ಯಕ್ರಮದಲ್ಲಿ ವಿಶೇಷ ಆಮಂತ್ರಿಕರಾಗಿ ಪಾಲ್ಗೊಂಡಿದ್ದ ಪ್ಯಾಡ್ ಊಮನ್ ಎಂದೇ ಖ್ಯಾತಿ ಪಡೆದಿರುವ ಭಾರತಿ ಗುಡ್ ಲಾನೂರ ರವರು ಮಾತನಾಡಿ ವಿದ್ಯಾರ್ಥಿನಿ ಯರಿಗೆ ಮುಟ್ಟಿನ ಬಗ್ಗೆ ಪಿಂಕ್ ಪ್ಯಾಡ್ ಬಗ್ಗೆ ಮಾಹಿತಿ ಹಾಗೂ ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಉಮಾ ತಂಬ್ರಹಳ್ಳಿಯವರು ವಹಿಸಿ ಮಾತನಾಡಿ ವಿದ್ಯಾರ್ಥಿನಿಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಹೆಲ್ತ್ ಅಂಡ್ ಹೈಜಿನ್ ಪ್ಯಾಡ್ ಉಪಯೋಗಿಸಬೇಕುಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕ್ಲಬ್ಬಿನ ಕಾರ್ಯದರ್ಶಿ, ಮೀನಾಕ್ಷಿ ಬಣ್ಣದ ಬಾವಿ ಉಪಾಧ್ಯಕ್ಷರಾದ ಮಧು ಶೆಟ್ಟರ್ ಖಜಾಂಚಿ ಆಶಾ ಕೌಲೂರ್ ಐ ಎಸ್ ಓ ಮಧು ನಿಲೋಗಲ್ ಎಡಿಟರ್ ನಾಗವೇಣಿ ಅಲ್ಲದೆ ಹಿರಿಯ ವೈದ್ಯರಾದ ಡಾ, ರಾಧಾ ಕುಲಕರ್ಣಿ ಸೇರಿದಂತೆ ಕೊಪ್ಪಳ ಇನ್ನರ್ವಿಲ್ ಕ್ಲಬ್ಬಿನ ಕಾರ್ಯ ಕಾರಣಿ ಸಮಿತಿ ಸದಸ್ಯರಾದ ಸುಜಾತಾ ಪಟ್ಟಣಶೆಟ್ಟಿ ತ್ರಿಶಾಲ ಪಾಟೀಲ್ ಹಾಗೂ ನೀತಾ ತಬ್ರಳ್ಳಿ ಮತ್ತು ಕ್ಲಬ್ಬಿನ ಸದಸ್ಯರಗಳು ಪಾಲ್ಗೊಂಡಿದ್ದರು.

# ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ಸಸಿ ನೆಡುವ ಮೂಲಕ ರಕ್ಷಾ ಬಂಧನ ಆಚರಣೆ



**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಕೇಂದ್ರ ಪರಿಸರ ಅರಣ್ಯ ಹಾಗೂ ಹವಾಮಾನ ಬದಲಾವಣೆ ಇಲಾಖೆ ಆಶ್ರಯದಲ್ಲಿ ರಕ್ಷಾ ಬಂಧನ ನಿಮಿತ್ತ ಸಂಸ್ಥೆಯ ಬೇರೆ ಬೇರೆ ವಿಭಾಗಗಳ ಮುಂದೆ ಎರಡನೂರು ಸಸಿಗಳನ್ನು ಹಚ್ಚುವ ಮೂಲಕ ಪ್ರಕೃತಿ ವಂದನಾ ಕಾರ್ಯಕ್ರಮ ಆಚರಿಸಲಾಯಿತು.
ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅರಣ್ಯ ಇಲಾಖೆಯ ಎಂ.ಎಸ್. ನಾವಿ, ಪರಿಸರ ಸಂರಕ್ಷಣೆ ಮಾಡಿದಿದ್ದರೆ ಮುಂದಿನ ದಿನಗಳಲ್ಲಿ ಬಹಳಷ್ಟು ಕಷ್ಟಕರ ಅನುಭವಿಸಬೇಕಾಗುತ್ತದೆ. ನಾವು ಮನುಷ್ಯರು ಪರಿಸರ ಹಾಳು ಮಾಡುವುದರಿಂದ ಪ್ರಾಣಿ ಪಕ್ಷಿಗಳು ಕೂಡ ಮರಗುವ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ನಮ್ಮ ಜವಾಬ್ದಾರಿ ಅರಿತು ಪರಿಸರ ಬೆಳೆಸುವ ಕೆಲಸ ಮಾಡಬೇಕೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಪರಿಸರ ಸಂರಕ್ಷಣೆಯಲ್ಲಿ ಯುವಕರ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಸಸಿಗಳನ್ನು ಹಚ್ಚಿದರೆ ಸಾಲದು.
ಬದಲಾಗಿ ಅವುಗಳು ಬೆಳೆಸುವ ಕೆಲಸ ಮಾಡಬೇಕೆಂದು ಕರೆ ನೀಡಿದರು. ನ್ಯಾಯವಾದಿ ಶ್ರೀನಿವಾಸ ಸತ್ತಿಕರ ಪರಿಸರ ಕುರಿತು ಮಾತನಾಡಿದರು. ಪ್ರಾಚಾರ್ಯ ಡಾ. ಪಿ.ಬಿ. ಅಪರಾಜ, ಡಾ. ಎಂ.ಆರ್. ಪಾಟೀಲ, ಎಸ್. ಎಂ. ಪರಮಗೊಂಡ, ಪಿ.ಬಿ. ಮಾಳಿ, ಡಾ. ಪಿ.ಎಸ್. ನಾಗರಾಳ, ಎಸ್.ಎಸ್. ಟಕ್ಕನ್ನವರ, ಜಿ.ಐ.ಕುಂಬಾರ ಮತ್ತಿತರಿದ್ದರು.

# ನಗರಸಭೆ ನೂತನ ಅಧ್ಯಕ್ಷರಾಗಿ ಗವರೋಜಿ ಅಧಿಕಾರ ಸ್ವೀಕಾರ



**ಜಮಖಂಡಿ :** ಸ್ಥಳೀಯ ನಗರಸಭೆಯಲ್ಲಿ ಅಗಷ್ಟ 16ರಂದು ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದಲ್ಲಿ ಗೆಲವು ಸಾಧಿಸಿದ ನೂತನ ಅಧ್ಯಕ್ಷರಾಗಿ ಪರಮಾನಂದ ಗವರೋಜಿ ಮತ್ತು ನೂತನ ಉಪಾಧ್ಯಕ್ಷರಾಗಿ ರೇಖಾ ಕಾಂಬಳೆ ಅಧಿಕಾರ ಸ್ವೀಕರಿಸಿದರು.
ವೇದಿಕೆಯಲ್ಲಿ ಮುತ್ತಿನಕಂತಿಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು, ಹುನ್ನೂರಿನ ವಿಶ್ವನಾಥ ಶಾಸ್ತ್ರೀ, ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಮುಖಂಡರಾದ ತೌಫೀಕ ಪಾರತನಳ್ಳಿ, ದಾನೇಶ ಘಾಟಗೆ, ಸುನೀಲ ಶಿಂಧೆ, ಕಿರಣ ಪಿಸಾಳ, ನಗರಸಭೆ ಪೌರಾಯುಕ್ತ ಜೋತಿಗಿರೀಶ ಸಹಿತ ನಗರಸಭೆ ಸದಸ್ಯರು ಇದ್ದರು.
ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಮೋಘ ಗೆಲವು ಸಾಧಿಸಿದ ಕಾಂಗ್ರೆಸ್ ಅಭ್ಯರ್ಥಿ ಪರಮಾನಂದ ಗೌರೋಜಿ ಅವರು ಬಿಜೆಪಿ ಅಭ್ಯರ್ಥಿ ವಿರುದ್ಧ 24 ಮತ ಪಡೆದು ಗೆಲವು ಸಾಧಿಸಿದ್ದರು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ರೇಖಾ ಕಾಂಬಳೆ ಅವರು ಬಿಜೆಪಿ ಅಭ್ಯರ್ಥಿ ವಿರುದ್ಧ 24 ಮತ ಪಡೆದು ಗೆಲವು ಸಾಧಿಸಿದ್ದರು.

# ಸಮಾಜ ಕಲ್ಯಾಣ ಇಲಾಖೆಯಲ್ಲಿ ದೀಕ್ಷಾ ಯಾತ್ರೆಗೆ ಅರ್ಜಿ ಆಹ್ವಾನ

**ಜಮಖಂಡಿ :** ಸನ್ 2024–25ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ಲಿಂಕ್ https://sw.kar.nic.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಅಗಷ್ಟ 31 ರ ಒಳಗಾಗಿ ಸಲ್ಲಿಸಬಹುದು. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ ಕಾರ್ಯಾಲಯಕ್ಕೆ ಸಲ್ಲಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಅರ್ಚನಾ ಎ. ಸಾಣೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸದ್ಭಾವನೆಯೊಂದೇ ಶಾಂತಿ, ಸೌಹಾರ್ದತೆಯ ಮಂತ್ರ: ಡಾ. ಸುರೇಶ ಹನಗಂಡಿ



**ಮೂಡಲಗಿ :** ಸಂಘರ್ಷ ಮತ್ತು ಹಿಂಸಾಚಾರ ಮಾರ್ಗಗಳನ್ನು ತೊಡೆದು ಹಾಕಿ ಸಹಕಾರ, ಅಹಿಂಸೆ ಹಾಗೂ ಸಮಾಲೋಚನೆ ವಿಧಾನಗಳ ಮೂಲಕ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವನ್ನು ಅನುಸರಿಸಬೇಕು ಎಂದು ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಕರೆ ನೀಡಿದರು.
ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮಂಗಳವಾರ ಹಮ್ಮಿಕೊಂಡಿದ್ದ 'ಸದ್ಭಾವನಾ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.
ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆಗಳ ಹೆಸರಿನಲ್ಲಿ ಒಡೆದು ಹೋಗುತ್ತಿರುವ ನಮ್ಮ ದೇಶಕ್ಕೆ ಏಕತೆ ತಂದು ಕೊಡುವುದೇ ಈ ಸೌಹಾರ್ದತೆ ಮತ್ತು ಸದ್ಭಾವನೆಗಳು. ದೇಶದ ಪ್ರತಿಯೊಬ್ಬ ಪ್ರಜೆಯು ಈ ಗುಣವನ್ನು ತಮ್ಮಲ್ಲಿ ಅಳವಡಿಸಿಕೊಂಡರೆ ನಮ್ಮ ದೇಶ ವಿಶ್ವದಲ್ಲಿಯೇ ಒಂದು ಪ್ರಬಲ ರಾಷ್ಟವಾಗುವುದರಲ್ಲಿ ಅನುಮಾನವಿಲ್ಲ. ಭಾರತದಲ್ಲಿ ಪ್ರತಿವರ್ಷ ಆಗಸ್ಟ್ 20ನೇ ದಿನಾಂಕವನ್ನು ರಾಷ್ಟ್ರೀಯ ಸದ್ಭಾವನಾ ದಿನ ಎಂದು ಆಚರಿಸಲಾಗುತ್ತದೆ. ಅಂದು ಎಲ್ಲರಿಗೂ ಸದ್ಭಾವನೆ, ಸೌಹಾರ್ದತೆ, ಶಾಂತಿ, ರಾಷ್ಟ್ರೀಯ ಏಕತೆಗಳ ಮಹತ್ವವನ್ನು ಸಾರುವ ಕಾರ್ಯಕ್ರಮಗಳು ಜರಗುತ್ತವೆ.
ಆಗಸ್ಟ್ 20 ಭಾರತದ ದಿವಂಗತ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಜನ್ಮ ದಿನವೂ ಹೌದು. ತಮ್ಮ ಆಡಳಿತ ಅವಧಿಯಲ್ಲಿ ರಾಷ್ಟ್ರೀಯ ಸೌಹಾರ್ದತೆಗೆ ವಿಶೇಷವಾಗಿ ಶ್ರಮಿಸಿದ ಅವರಿಗೆ ಗೌರವ ನೀಡುವ ಸಲುವಾಗಿ ಅವರ ಜನ್ಮದಿನವನ್ನು ರಾಷ್ಟ್ರೀಯ ಸದ್ಭಾವನಾ ದಿನವನ್ನಾಗಿ ಆಚರಿಸಲು ಆಗಿನ ಕಾಂಗ್ರೆಸ್ ಸರ್ಕಾರ ನಿರ್ಧರಿಸಿತ್ತು. ಈ ಆಚರಣೆ ಈಗಲೂ ಮುಂದುವರಿದಿದೆ ಎಂದರು.
ರಾಸೇಯೋ ಸಹ ಕಾರ್ಯಕ್ರಮ ಅಧಿಕಾರಿ ಪ್ರೊ.
ಡಿ.ಎಸ್. ಹುಗ್ಗಿ ಪ್ರತಿಜ್ಞಾ ವಿಧಿ ಬೋಧಿಸಿದರು.
ಕಾರ್ಯಕ್ರಮದಲ್ಲಿ ಅಧ್ಯಾಪಕರುಗಳಾದ ಡಾ. ಎಂ.ಬಿ. ಕುಲಮೂರ, ಆರ್.ಎಸ್. ಪಂಡಿತ, ವಸುಂದರಾ ಕಾಳೆ, ಎಸ್.ಎಂ. ಬಂಡಿ, ಸಂತೋಷ ಜೋಡಕುರಳಿ, ಎಂ.ಎನ್. ಮುರಗೋಡ,
ಬಿ.ಸಿ. ಮಾಳಿ, ಸಾಗರ ಐದಮನಿ, ಗ್ರಂಥಪಾಲಕ ಬಿ.ಬಿ. ವಾಲಿ ಹಾಗೂ
ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಿಎಂ ಸಿದ್ದು ರಿಂದ ಪಟೇಲ್ ಹಾಗೂ ಗದುಗಿನಮಠ ಗೆ ಸನ್ಮಾನ–ಅಭಿನಂದನೆ



**ಕೊಪ್ಪಳ :** ಕೊಪ್ಪಳ ನಗರಸಭೆಗೆ ನೂತನ ಅಧ್ಯಕ್ಷರಾಗಿ ಭಾರಿ ಪ್ರಚಂಡ ಬಹುಮತದಿಂದ ಆಯ್ಕೆಗೊಂಡ ಕಾಂಗ್ರೆಸ್ಸಿನ ಅಮ್ಜದ್ ಪಟೇಲ್ ಮತ್ತು ಉಪಾಧ್ಯಕ್ಷರಾಗಿ ಜಯ ಸಾಧಿಸಿದ ಅಶ್ವಿನಿ ಗದುಗಿನ ಮಠ ರವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸನ್ಮಾನಿಸಿ ಅಭಿನಂದಿಸಿ ಶುಭ ಕೋರಿದರು
ಬುಧವಾರ ವಿಜಯಪುರ ಜಿಲ್ಲೆ ಪ್ರವಾಸ ಮುಗಿಸಿ ಕೊಂಡು ಬೆಂಗಳೂರಿಗೆ ತೆರಳುವ ಮಾರ್ಗ ಕೊಪ್ಪಳದ ಖಾಸಗಿ ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿ ಅವರನ್ನು ಅಭಿನಂದಿಸಿದ ಸಂದರ್ಭದಲ್ಲಿ
ಮಾತನಾಡಿ ತಮ್ಮ ಆಯ್ಕೆಗೆ ಮಾರ್ಗದರ್ಶನ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೆ ನಗರಸಭೆ ಸರ್ವ ಸದಸ್ಯರ ಪರವಾಗಿ ಸನ್ಮಾನಿಸಿ ಅಭಿನಂದಿಸಿದ ಬಳಿಕ ನಗರದ ಸರ್ವಾಂಗಣ ಅಭಿವೃದ್ಧಿಗಾಗಿ ಸರ್ಕಾರದ ವಿಶೇಷ ಅನುದಾನ ಒದಗಿಸಿಕೊಡುವಂತೆ ಮುಖ್ಯಮಂತ್ರಿ ಅವರಲ್ಲಿ ಕೊಪ್ಪಳ ನಗರಸಭೆಯ ನೂತನ ಅಧ್ಯಕ್ಷ ಅಮ್ಜದ್ ಪಟೇಲ್ ಮನವಿ ಮಾಡಿಕೊಂಡರು ಅದಕ್ಕೆ ಸ್ಪಂದಿಸಿದ ಅವರು ಅಭಿವೃದ್ಧಿ ಕೆಲಸಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು
ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರ ಬಸವರಾಜ್ ರಾಯರೆಡ್ಡಿ ಸಂಸದ ಕೆ ರಾಜಶೇಖರ್ ಹಿಟ್ನಾಳ್ ಶಾಸಕ ಕೆ ರಾಘವೇಂದ್ರ ಹಿಟ್ನಾಳ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಬಯ್ಯಾಪುರ ಅಲ್ಪಸಂಖ್ಯಾತರ ನಾಯಕ ಮೈನುದ್ದೀನ್ ಮುಲ್ಲಾ ಕುಷ್ಟಗಿ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಸದ್ಭಾವನಾ ದಿನ: ಜಿಲ್ಲಾಡಳಿತದಿಂದ ಪ್ರತಿಜ್ಞಾ ವಿಧಿ ಸ್ವೀಕಾರ



**ಕೊಪ್ಪಳ :** ಸದ್ಭಾವನಾ ದಿನದ ಅಂಗವಾಗಿ ಜಿಲ್ಲಾಡಳಿತದಿಂದ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮವು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 20ರಂದು ನಡೆಯಿತು.
ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರ ಸಮ್ಮುಖದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಸದ್ಭಾವನಾ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿಯವರು ಪ್ರತಿಜ್ಞಾ ವಿಧಿ ಬೋಧಿಸಿದರು. ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಭೇದಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಭೇದಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇವೆಂದು ಸಹ ಪ್ರತಿಜ್ಞೆ ಮಾಡುತ್ತೇನೆ ಎಂದು ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಪ್ರತಿಜ್ಞೆ ಸ್ವೀಕರಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಇತರರಿದ್ದರು.

## ರಾಷ್ಟ್ರೀಯ ಚಿತ್ರಕಲಾ ಸ್ಪರ್ಧೆಯಲ್ಲಿ ಅಪೂರ್ವಾಗೆ ಪ್ರಶಸ್ತಿ



**ಜಮಖಂಡಿ :** ನಗರದ ಸಿದ್ದಾಪುರದ ಸನದಿ ಇಂಟರನ್ಯಾಶನಲ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಅಪೂರ್ವಾ ರಾಜಶೇಖರ ಹೊಸಟ್ಟಿ ಅವರಿಗೆ ರಾಷ್ಟ್ರೀಯ ಚಿತ್ರಕಲಾ ಸ್ಪರ್ಧೆಯಲ್ಲಿ ಎಂ.ಎ.ಚಟ್ಟಿ ಪ್ರಶಸ್ತಿ ಲಭಿಸಿದೆ. ಧಾರವಾಡದ ಕೃಷಿ ವಿಶ್ವ ವಿದ್ಯಾಲಯದ ಸಭಾಂಗಣದಲ್ಲಿ ಬಣ್ಣದಮನೆ ಸಾಂಸ್ಕೃತಿಕ ವೇದಿಕೆ ಗದಗ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಹಾಗೂ ಭಾಲಭವನ ಸೊಸೈಟಿ ಬೆಂಗಳೂರು ಸಹಯೋಗದಲ್ಲಿ ಚಿಣ್ಣರ ಚಿತ್ರ ಚಿತ್ತಾರ ಹಮ್ಮಿಕೊಂಡ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅಪೂರ್ವಾ ರಾಜಶೇಖರ ಹೊಸಟ್ಟಿ ಎಂ.ಎ.ಚಟ್ಟಿ ಪ್ರಶಸ್ತಿಗೆ ಭಾಜನಳಾಗಿದ್ದಾಳೆ. ವಿದ್ಯಾರ್ಥಿ ಸಾಧನೆಗೆಸನದಿ ಎಜ್ಯುಕೇಶನಲ್ ಹೆಲ್ತ್ ರೂರಲ್ ಡೆವೆಲಪ್ಮೆಂಟ್ ಟ್ರಸ್ಟ ಅಧ್ಯಕ್ಷ ನಾಗಪ್ಪ ಸನದಿ, ಕಾರ್ಯಾಧ್ಯಕ್ಷ ಡಾ.ಜಿ.ಎನ್.ಸನದಿ, ಪ್ರಾಚಾರ್ಯ ಡಾ.ಮಹೇಶ ಕಡಾಲಕತ್ತ ಅಭಿನಂದಿಸಿದ್ದಾರೆ.

## ರತ್ನವ್ವ ಕದಮ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿಯ ಬಸವ ನಗರದ ಚಿಂತಾಮಣಿ ಅಪ್ಲಾಯನ್ಸ್ ಹತ್ತಿರದ ನಿವಾಸಿ ರತ್ನವ್ವಾ ಕದಮ(84) ನಿಧನರಾದರು. ಮೃತರಿಗೆ ಓರ್ವ ಪುತ್ರ ಸೇರಿದಂತೆ ಅಪಾರ ಬಳಗವಿದೆ.

## ನಿಂಗಪ್ಪ ಆದರಗಿ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿಯ ತಟಗಾರ ಗಲ್ಲಿಯ ನಿವಾಸಿ, ಆದಿಬಣಜಿಗ ಸಮಾಜದ ಹಿರಿಯರಾದ ನಿಂಗಪ್ಪ ಆದರಗಿ(68) ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ.

# ಇನ್ನರ್ ವೀಲ್ ಕ್ಲಬ್ ವತಿಯಿಂದ ಹಿರಿಯ ನಾಗರಿಕರ ದಿನಾಚರಣೆ



**ಕೊಪ್ಪಳ :** ನಗರದ ಸುರಭಿ ವೃದ್ಧಾಶ್ರಮದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಹಿರಿಯ ನಾಗರಿಕರ ದಿನಾಚರಣೆಯನ್ನು ಗ'ು ರ'ು ವಾ ರ' ದ' ಂ ದ'ು ಆಚರಿಸಲಾಯಿತು
ಹಿರಿಯ ನಾಗರಿಕ ರೊಂದಿಗೆ ಸಮಯ ಕಳೆಯಲು ಸಂತೋಷ ಹಂಚಿಕೊಳ್ಳಲು ಮತ್ತು ಅವರಿಗೆ ಗೌರವ ಬೆಲೆ ಕೊಡಲು ಮಹಿಳೆಯರಲ್ಲಿ ಯುವಕರಲ್ಲಿ ಜಾಗೃತಿ ಮೂಡಿಸಲಾಯಿತು
ಸಮಾರಂಭದ ಅಧ್ಯಕ್ಷತೆಯನ್ನು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಹಳ್ಳಿ ವಹಿಸಿದ್ದರು ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ವೃದ್ಧಾಶ್ರಮದಲ್ಲಿರುವ ಹಿರಿಯ ನಾಗರಿಕರಿಗೆ ಹಣ್ಣು ಹಂಪಲ ಇತರ ಅಗತ್ಯ ವಸ್ತುಗಳನ್ನು ಸೇರಿದಂತೆ ಸಮವಸ್ತ್ರಗಳನ್ನು ನೀಡಿ ಅವರನ್ನು ಗೌರವಿಸಲಾಯಿತು
ಈ ಸಂದರ್ಭದಲ್ಲಿ ಕೊಪ್ಪಳ ಎನ್ನರವಿಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಐಎಸ್ಓ ಮಧು ನಿಲೋಗಲ್ ಕಾರ್ಯಕಾರಿಣಿ ಸಮಿತಿ ಹಿರಿಯ ಸದಸ್ಯರಾದ ಡಾ, ರಾಧಾ ಕುಲಕರ್ಣಿ ಪಾರ್ವತಿ ಪಾಟೀಲ್ ನೀತಾ ತಂಬ್ರಹಳ್ಳಿ ಮಾಜಿ ಅಧ್ಯಕ್ಷರಾದ ಶರಣಮ್ಮ ಪಾಟೀಲ್ ಸದಸ್ಯರಾದ ಶಾರದಾ ದಾದ್ಮಿ ಅನಿತಾ ಬಜಾರ್ ಮಠ ಜ್ಯೋತಿ ಮಟ್ಟಿ ಶೋಭಾ ಕವಿತಾ ಶೆಟ್ಟರ್ ನಾಗರತ್ನ ರೇಖಾ ಕಡ್ಲಿ ಹೇಮ ಸೇರಿದಂತೆ ಮಹಿಳಾ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State